# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ಜೂನ್ 01, 2024

ಸಂಪುಟ : 51 ಸಂಚಿಕೆ : 18 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


## ಬ್ಯಾಂಕ್ ವ್ಯವಸ್ಥಾಪಕನ ಅಪಹರಣ, ಮಾರಣಾಂತಿಕ ಹಲ್ಲೆ : ಇಬ್ಬರ ಬಂಧನ




ಹೊನ್ನಾಳಿ, ಮೇ 31- ದಾವಣಗೆರೆಯ ಬ್ಯಾಂಕ್ ಮ್ಯಾನೇಜರ್‌ರವರನ್ನು ಶುಕ್ರವಾರ ಸಂಜೆ ಅಪಹರಿಸಿದ ತಂಡ ಹೊನ್ನಾಳಿಯಲ್ಲಿ ಮಾರಣಾಂತಿಕ ಹಲ್ಲೆ ಮಾಡಿದ್ದು, ಘಟನೆಗೆ ಸಂಬಂಧಿಸಿದಂತೆ ಇಬ್ಬರನ್ನು ಹೊನ್ನಾಳಿ ಪೊಲೀಸರು ಬಂಧಿಸಿದ್ದಾರೆ.

ಲೋನ್ ಕೊಡಲು ಸಾಧ್ಯವಿಲ್ಲ, ದಾಖಲೆಗಳು ನಕಲಿ ಎಂದು ತಿಳಿಸಿದ ಹಿನ್ನೆಲೆಯಲ್ಲಿ ಆರು ಜನರ ತಂಡ ಹಲ್ಲೆ ಮಾಡುವ ಕೃತ್ಯಕ್ಕೆ ಮುಂದಾಗಿತ್ತು ಎಂದು ತಿಳಿದು ಬಂದಿದೆ.

ಹಲ್ಲೆಗೊಳಗಾದ ವ್ಯಕ್ತಿ ಹೊನ್ನಾಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಹಲ್ಲೆಗೊಂಡ ವ್ಯಕ್ತಿಯು ದಾವಣಗೆರೆ ಕೆಟಿಜಿ ನಗರದ ಎಲ್‌ಐಸಿ ಹೌಸಿಂಗ್ ಕಾರ್ಪೊರೇಷನ್ ಬ್ಯಾಂಕ್ ಮ್ಯಾನೇಜರ್ ಶರಣ್ ಎಂದು ತಿಳಿದಿದ್ದು, ಇವರನ್ನು ಮಹಿಳೆಯೊಬ್ಬರ ಪ್ರೀತಿ ನಾಟಕದ ನೆಪ ದಲ್ಲಿ ಅಪಹರಣ ಮಾಡಿದ ತಂಡ ನೀನು ಮಹಿಳೆ ಒಬ್ಬಳನ್ನು ಚುಡಾಯಿಸುತ್ತೀಯಾ ಎಂದು ಅಪಹರಣಕ್ಕೆ (4ನೇ ಪುಟಕ್ಕೆ)

## ಭಾರತಕ್ಕೆ 100 ಮೆಟ್ರಿಕ್ ಟನ್ ಬಂಗಾರ ವಾಪಸ್



ಮುಂಬೈ, ಮೇ 31 – ಭಾರತ ತನ್ನ 100 ಮೆಟ್ರಿಕ್ ಟನ್ ಬಂಗಾರವನ್ನು ಬ್ರಿಟನ್‌ನಿಂದ ತನ್ನ ತಿಜೋರಿಗಳಿಗೆ ವಾಪಸ್ ತಂದಿದೆ ಎಂದು ಮೂಲಗಳು ತಿಳಿಸಿವೆ.

1991ರ ನಂತರ ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಪ್ರಮಾಣದ ಬಂಗಾರವನ್ನು ಭಾರತ ಸಾಗಣೆ ಮಾಡಿದೆ. 1991ರಲ್ಲಿ ವಿದೇಶಿ ವಿನಿಮಯ ಬಿಕ್ಕಟ್ಟು ನಿವಾರಿಸಲು ದೊಡ್ಡ ಪ್ರಮಾಣದ ಬಂಗಾರವನ್ನು ಭಾರತದ ತಿಜೋರಿಯಿಂದ ಹೊರ ತೆಗೆಯಲಾಗಿತ್ತು.

ಸರ್ಕಾರ ಈಗ 822 ಮೆಟ್ರಿಕ್ ಟನ್ ಬಂಗಾರ ಹೊಂದಿದೆ. 2024ರ ಹಣಕಾಸು ವರ್ಷದಲ್ಲಿ ಬಂಗಾರದ ಸಂಗ್ರಹ 27.46 ಮೆಟ್ರಿಕ್ ಟನ್ ಹೆಚ್ಚಾಗಿತ್ತು.

ದೊಡ್ಡ ಪ್ರಮಾಣದ ಬಂಗಾರವನ್ನು ವಿದೇಶಗಳಲ್ಲಿ ಇಡಲಾಗಿದೆ. ಬ್ಯಾಂಕ್ ಆಫ್ ಇಂಗ್ಲೆಂಡ್ ಸೇರಿದಂತೆ ಹಲವು ಸಂಸ್ಥೆಗಳಲ್ಲಿ ಬಂಗಾರ (4ನೇ ಪುಟಕ್ಕೆ)




## ನಿಗಮದ ಪ್ರಕರಣ ಸಿಬಿಐಗೆ ಇಲ್ಲ



ಬೆಂಗಳೂರು, ಮೇ 31 - ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪ ಪ್ರಕರಣವನ್ನು ನಾವಾಗಿಯೇ ಸಿಬಿಐಗೆ ವಹಿಸುವುದಿಲ್ಲ ಎಂದು ಗೃಹ ಸಚಿವ ಜಿ. ಪರಮೇಶ್ವರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೂರು ಕೋಟಿ ರೂ. ಮೇಲಿನ ಮೊತ್ತದ ಹಗರಣಗಳು ಸಿಬಿಐ ತನಿಖೆಗೆ ವರ್ಗಾವಣೆಯಾಗುತ್ತವೆ. ಸರ್ಕಾರದ ಆದೇಶದ ಮೇಲೆ ಸಿಐಡಿ ತನಿಖೆ ಆರಂಭಿಸಿದೆ. ನೂರು ಕೋಟಿ ರೂ.ಗಳಿಗೂ ಅಧಿಕ (4ನೇ ಪುಟಕ್ಕೆ)

## ನಿಗಮದ ಅವ್ಯವಹಾರದ ತನಿಖೆಗೆ ಎಸ್.ಐ.ಟಿ. ರಚನೆ ಆದೇಶ

ಬೆಂಗಳೂರು, ಮೇ 31 - ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ನಡೆದಿರುವ ಆರ್ಥಿಕ ಅವ್ಯವಹಾರಗಳ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ರಾಜ್ಯ ಸರ್ಕಾರ ಆದೇಶಿಸಿದೆ. ತನಿಖಾ ತಂಡಕ್ಕೆ ಸಿಐಡಿಯ ಅಪರ ಪೊಲೀಸ್ ನಿರ್ದೇಶಕ ಮನೀಷ್ ಖರ್ಬೀಕರ್ ಅವರನ್ನು (4ನೇ ಪುಟಕ್ಕೆ)

## ಎಸ್ಸೆಸ್ ಆರೋಗ್ಯದಲ್ಲಿ ಚೇತರಿಕೆ



ದಾವಣಗೆರೆ, ಮೇ 31- ಕಾಂಗ್ರೆಸ್ ಹಿರಿಯ ನಾಯಕ, ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರ ಆರೋಗ್ಯದಲ್ಲಿ ಶುಕ್ರವಾರ ಏರುಪೇರಾದ ಕಾರಣ, ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಸ್ಪರ್ಷ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರು ಚೇತರಿಸಿಕೊಂಡಿದ್ದಾರೆ.

ಹೃದಯ ಸಂಬಂಧಿ ಹಾಗೂ ಕಫದ ತೊಂದರೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರನ್ನು ದಾವಣಗೆರೆ ಎಸ್.ಎಸ್ ಹೈಟೆಕ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಂತರ ಅವರನ್ನು ಬೆಂಗಳೂರಿನ ಸ್ಪರ್ಷ ಆಸ್ಪತ್ರೆಗೆ ದಾಖಲಿಸಲಾಯಿತು.

ಆಸ್ಪತ್ರೆಯಲ್ಲಿ ವೈದ್ಯರೊಂದಿಗೆ ವಿಡಿಯೋದಲ್ಲಿ ಮಾತನಾಡಿರುವ ಶಿವಶಂಕರಪ್ಪ ಅವರು, ತಾವು ಆರೋಗ್ಯದಿಂದ ಇರುವುದಾಗಿ ಹೇಳಿದ್ದಾರೆ.

## ಸಂತೇಬೆನ್ನೂರು ಗುತ್ತಿಗೆದಾರ ಆತ್ಮಹತ್ಯೆ : ತನಿಖೆಗೆ ಖರ್ಗೆ ಸೂಚನೆ

ಬೆಂಗಳೂರು, ಮೇ 31 – ಕೆ.ಆರ್.ಐ.ಡಿ.ಎಲ್. ಗುತ್ತಿಗೆ ಹಣ ಪಾವತಿಯಾಗಿಲ್ಲ ಎಂದು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕು ಸಂತೆಬೆನ್ನೂರಿನ ಗುತ್ತಿಗೆದಾರ ಪಿ.ಎಸ್.ಗೌಡರ್ ಅವರು ಮರಣ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ.


ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಹಿರಿಯ ಅಧಿಕಾರಿಗಳ ಸಮಿತಿ ರಚಿಸಲು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸೂಚನೆ ನೀಡಿದ್ದಾರೆ.

ಪಿ.ಎಸ್. ಗೌಡರ್ (50) ಮೇ 26 ರಂದು ಮನೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದನು. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತದಿಂದ 2023-24ನೇ ಸಾಲಿನ ಬಾಕಿ ಬಿಲ್ ಪಾವತಿಯಾಗದ ಹಿನ್ನೆಲೆಯಲ್ಲಿ ಮನನೊಂದ ಹೀಗೆ ಮಾಡಿಕೊಳ್ಳುತ್ತಿರುವುದಾಗಿ ತಿಳಿಸಿದ್ದರು. ಅಲ್ಲದೆ ಇವರ ಇಬ್ಬರು ಸಹೋದರರು ಹಣಕಾಸು ವಿಚಾರವಾಗಿ ಮೋಸ ಮಾಡಿದ್ದಾರೆ ಎಂದೂ ಆರೋಪಿಸಿದ್ದಾರೆ.












| NAME | Expected NEET-2024 | NEET-2023 Marks | Improvement Marks |
| --- | --- | --- | --- |
| RAHUL B. N. | 655 | 287 | 368 |
| CHINMAY N. | 650 | 323 | 327 |
| ADARSH P. B. | 690 | 364 | 326 |
| YASHVANTH H. S. | 655 | 415 | 250 |
| BABUPATEL M. B. | 685 | 479 | 206 |
| NAVEENDEEP G. N. | 690 | 487 | 203 |
| BHUVAN PATIL | 660 | 458 | 202 |
| V. VISHNU | 665 | 471 | 194 |
| TANVI AAZMI V | 653 | 464 | 189 |
| KOUSTHUB A. | 670 | 491 | 179 |
| SAFA H. R. | 650 | 485 | 165 |



# ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿ

## ಜಗಳೂರಿನಲ್ಲಿ ಜರುಗಿದ ತರಬೇತಿ ಕಾರ್ಯಕ್ರಮದಲ್ಲಿ ಬಿ.ಓ ಮಲ್ಲಿಕಾರ್ಜುನ ಸಲಹೆ



ದಾವಣಗೆರೆ, ಮೇ 31- ಬರ ನಿರೋಧಕ ಹಾಗೂ ಮಧ್ಯಮ ಅವಧಿ ತೊಗರಿ ತಳಿಯಾದ ಟಿಎಸ್-3ಆರ್ ಅನ್ನು ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ಬೆಳೆಯಬೇಕು ಎಂದು ಬೇಸಾಯ ತಜ್ಞರಾದ ಬಿ.ಓ. ಮಲ್ಲಿಕಾರ್ಜುನ್ ತಿಳಿಸಿದರು.

ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಜಗಳೂರು ತಾಲ್ಲೂಕಿನ ಗುತ್ತಿದುರ್ಗ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ತೊಗರಿ ಬೆಳೆಯ ಮುಂಚೂಣಿ ಪ್ರಾತ್ಯಕ್ಷಿಕೆಯ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಮೆಕ್ಕೆಜೋಳವನ್ನು ಏಕ ಬೆಳೆಯಾಗಿ ಬೆಳೆದಾಗ ನಷ್ಟವಾಗ ಬಹುದು, ಆ ಕಾರಣದಿಂದ ಮೆಕ್ಕೆಜೋಳದಲ್ಲಿ ಅಂತರ ಬೆಳೆಯಾಗಿ ದ್ವಿದಳ ಧಾನ್ಯವಾದ ತೊಗರಿಯನ್ನು ಬೆಳೆಯುವುದು ಸೂಕ್ತ. ಪ್ರತಿ ಎಕರೆ ತೊಗರಿ ಬೀಜಕ್ಕೆ ಶಿಫಾರಸ್ಸು ಮಾಡಿದ ಜೈವಿಕ ಗೊಬ್ಬರಗಳಾದ ರೈಸೋಬಿಯಂ ಮತ್ತು ರಂಜಕ ಕರಗಿಸುವ ಗೊಬ್ಬರದಿಂದ ಬೀಜೋಪಚಾರ ಮಾಡಿ ಬಿತ್ತನೆ ಮಾಡುವುದರಿಂದ ಶೇಕಡ 25 ರಷ್ಟು ರಾಸಾಯನಿಕ ಗೊಬ್ಬರದಲ್ಲಿ ಕಡಿತಗೊಳಿಸ ಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ.ಎನ್ ಮಾತನಾಡಿ, ರೈತರು ಆಧುನಿಕ ತಂತ್ರಜ್ಞಾನಗಳು ಹಾಗೂ ಅಧಿಕ ಇಳುವರಿ ಕೊಡುವ ತಳಿಗಳ ಬಳಕೆಯನ್ನು ಮಾಡಬೇಕು ಎಂದು ತಿಳಿಸಿದರು.

ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ರಸಗೊಬ್ಬರವನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ ಹಾಗೂ ಉತ್ಪಾದನಾ ವೆಚ್ಚವನ್ನು ತಗ್ಗಿಸಬಹುದು ಎಂದು ಮಣ್ಣು ವಿಜ್ಞಾನಿ ಹೆಚ್. ಎಂ. ಸಣ್ಣಗೌಡರು ತಿಳಿಸಿದರು.

# ಶಿಕ್ಷಕರ ಸಮಸ್ಯೆ ನೀಗಲು ಕಾಂಗ್ರೆಸ್ ಸರ್ಕಾರ ಬದ್ಧ

## ಶಾಸಕ ಕೆ.ಎಸ್. ಬಸವಂತಪ್ಪ



ಮಾಯಕೊಂಡ, ಮೇ 31- ಶಿಕ್ಷಕರ ಸಮಸ್ಯೆ ನೀಗಲು ಕಾಂಗ್ರೆಸ್ ಬದ್ಧವಾಗಿದ್ದು, ಶಿಕ್ಷಕರು ವಿಧಾನ ಪರಿಷತ್ ಚುನಾವಣೆಯಲ್ಲಿ ಡಿ.ಟಿ ಶ್ರೀನಿವಾಸ್ ಅವರಿಗೆ ಮತ ದಾನ ಮಾಡಬೇಕು ಎಂದು ಕೆ.ಎಸ್. ಬಸವವಂತಪ್ಪ ಮನವಿ ಮಾಡಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಹಲವು ಹಳ್ಳಿಗಳಲ್ಲಿ ವಿಧಾನ ಪರಿಷತ್ ಅಭ್ಯರ್ಥಿ ಶ್ರೀನಿವಾಸ ಪರ ಮತಯಾಚನೆ ಮಾಡಿ ಅವರು ಮಾತನಾಡಿದರು.

ಶಿಕ್ಷಕರ ವೇತನ ತಾರತಮ್ಯ ಸೇರಿದಂತೆ ಹಲವು ಜ್ವಲಂತ ಸಮಸ್ಯೆಗಳಿಗೆ ಪರಿಹಾರ ನೀಡಲು ಕಾಂಗ್ರೆಸ್ ಸದಾ ಸಿದ್ಧವಾಗಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾದ ಗಲೆಲ್ಲಾ ಕಾಲಕಾಲಕ್ಕೆ ವೇತನ, ತುಟ್ಟಿಭತ್ಯೆ ನಿಗದಿ ಮಾಡಿದೆ. ವೇತನ ಆಯೋಗಗಳ ಶಿಫಾರಸ್ಸಿನಂತೆ ವೇತನ ಜಾರಿಗೊಳಿಸಿದೆ. ದಕ್ಷತೆ ಹೆಚ್ಚಿಸಿ, ಗೌರವದ ಬದುಕು ನೀಡಿದೆ. ಎಲ್ಲಾ ವರ್ಗದ ನೌಕರರ ಹಿತರಕ್ಷಣೆ ಮಾಡಿದೆ. ಆಡಳಿತ ಪಕ್ಷದ ವಿಧಾನ ಪರಿಷತ್ ಸದಸ್ಯರಿದ್ದರೆ, ಹೆಚ್ಚು ಅನುಕೂಲವಾಗುತ್ತದೆ. ನಿವೃತ್ತ ನೌಕರರ ಜೀವನ ಸುಧಾರಿಸಿ ಗೌರವದ ಬದುಕು ಕಲ್ಪಿಸುವ ಸದುದ್ದೇಶ ದಿಂದ, ಒಪಿಎಸ್ ಜಾರಿಗೊಳಿಸುವ ಭರವಸೆ ಯನ್ನು ಪ್ರಣಾಳಿಕೆಯಲ್ಲಿ ಸೇರಿಸಲಾಗಿದೆ. ಶಿಕ್ಷಕರು ಸೇರಿದಂತೆ ಎಲ್ಲಾ ನೌಕರರ ಹಿತಕಾಯಲು ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಕ್ಷೇತ್ರ ವ್ಯಾಪ್ತಿಯ ಆಲೂರು ಹಟ್ಟಿ, ಮೆಳ್ಳೆಕಟ್ಟೆ, ಅಣಜಿ, ಕಂದನಕೋವಿ, ಆನಗೋಡು ಗ್ರಾಮದ ಪ್ರೌಢಶಾಲೆಗಳಿಗೆ ತೆರಳಿ ಮತಯಾಚಿ ಸಲಾಯಿತು. ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಶೇಖರ್, ತಾಲ್ಲೂಕು ಪಂಚಾಯತ್ ಮಾಜಿ ಉಪಾಧ್ಯಕ್ಷ ಶಿವಣ್ಣ, ಡಿ.ಟಿ.ಹನುಂಮತಪ್ಪ, ಪಾಟೀಲ್ ಮತ್ತಿತರರಿದ್ದರು.

# ಹರಿಹರದಲ್ಲಿ ಇಂದು ಭೂಮೇಶ್ ಅವರಿಗೆ ಬೀಳ್ಕೊಡುಗೆ



ಹರಿಹರ ನಗರದ ಪಶು ಇಲಾಖೆಯ ಕಚೇರಿಯಲ್ಲಿ ಜಾನುವಾರ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರೂ ಆದ ಎ.ಕೆ.ಭೂಮೇಶ್ ಅವರು ಶುಕ್ರವಾರ ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು, ಇಂದು ಮಧ್ಯಾಹ್ನ 12 ಗಂಟೆಗೆ ಲಕ್ಷ್ಮಿ ಮಹಲ್‌ನಲ್ಲಿ ಸರ್ಕಾರಿ ನೌಕರರ ಸಂಘದಿಂದ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. 33 ವರ್ಷಗಳ ಕಾಲ ಪಶು ಇಲಾಖೆಯಲ್ಲಿ ವಿವಿಧ ಹಂತಗಳಲ್ಲಿ ಸೇವೆ ಸಲ್ಲಿಸಿದ ಭೂಮೇಶ್ ಅವರು, ಈ ಹಿಂದೆ ಶಾಸಕ ಬಿ.ಪಿ.ಹರೀಶ್ ಅವರ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸಿದ್ದರು.

# ದೃಶ್ಯಕಲಾ ಕಾಲೇಜಿನಲ್ಲಿ ಇಂದು ಭಿತ್ತಿಚಿತ್ರ ಶಿಬಿರ

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ವತಿಯಿಂದ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುತ್ತಿರುವ 7 ದಿನಗಳ ಭಿತ್ತಿಚಿತ್ರ ಕಲಾ ಶಿಬಿರದಲ್ಲಿ ಇಂದು ಮುಂಜಾನೆ 6.30ಕ್ಕೆ ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ಡಿ.ಹೆಚ್. ಸುರೇಶ್ ಅವರು ಧ್ವಜಾರೋಹಣ ನೆರವೇರಿಸುವರು.

ಸಂಜೆ 5.30ರ ಏರ್ಪಾಡಾಗಿರುವ ಕಾರ್ಯಕ್ರಮದಲ್ಲಿ 'ಸಮಾಜದಲ್ಲಿ ಭಿತ್ತಿಪತ್ರಗಳ ಮಹತ್ವ' ವಿಷಯ ಕುರಿತು ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕ ಎಸ್.ಹೆಚ್. ಹರೀಶ್ ಅವರು ಉಪನ್ಯಾಸ ನೀಡುವರು. ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯದ ಬೋಧನಾ ಸಹಾಯಕರಾದ ಡಾ. ಎಂ. ಸುಮಕಾಂತಿ ಅವರು ಮುಖ್ಯ ಅತಿಥಿಯಾಗಿದ್ದಾರೆ.

# ತಿಮ್ಮಪ್ಪನ ದೇವಾಲಯದಲ್ಲಿ ಷಾ ಪೂಜೆ



ತಿರುಪತಿ, ಮೇ 31 – ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಶುಕ್ರವಾರ ತಿರುಪತಿ ತಿಮ್ಮಪ್ಪನ ದೇವಾಲಯದಲ್ಲಿ ಪೂಜೆ ಸಲ್ಲಿಸಿದ್ದಾರೆ. ಪತ್ನಿ ಕೋನಲ್ ಷಾ ಅವರೊಂದಿಗೆ ಬಿಜೆಪಿ ನಾಯಕ ಬೆಳಿಗ್ಗೆ 8 ಗಂಟೆಗೆ ತೆರಳಿ ಪೂಜೆ ಸಲ್ಲಿಸಿದರು. ಅರ್ಧ ಗಂಟೆ ಕಾಲ ಅವರು ದೇವಾಲಯದಲ್ಲಿದ್ದರು. ಗುರುವಾರದಂದು ಅವರು ತಮಿಳುನಾಡಿನ ಪುದುಕೊಟ್ಟೈನಲ್ಲಿರುವ ಕೊಟ್ಟೈ ಭೈರವರ್ ದೇವಾಲಯದಲ್ಲಿ ಪೂಜೆ ಸಲ್ಲಿಸಿದ್ದರು.

# ಪ್ರಜ್ವಲ್ ಜೂ.6 ರವರೆಗೆ ಎಸ್.ಐ.ಟಿ. ವಶಕ್ಕೆ



ಬೆಂಗಳೂರು, ಮೇ 31 - ಲೈಂಗಿಕ ದೌರ್ಜನ್ಯ, ಅತ್ಯಾಚಾರ ಹಾಗೂ ಅಪಹರಣ ಆರೋಪ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಂಸದ ಪ್ರಜ್ವಲ್ ರೇವಣ್ಣ ಅವರ ಹೆಚ್ಚಿನ ವಿಚಾರಣೆಗಾಗಿ ಜೂನ್ 6ರವರೆಗೆ ಎಸ್‌ಐಟಿ ವಶಕ್ಕೆ ನೀಡಿ ನ್ಯಾಯಾಲಯ ಆದೇಶಿಸಿದೆ.

ವಿದೇಶದಿಂದ ಪ್ರಜ್ವಲ್ ಅವರನ್ನು ಶುಕ್ರವಾರ ಮುಂಜಾನೆ ವಶಕ್ಕೆ ಪಡೆದ ಎಸ್‌ಐಟಿ ಪೊಲೀಸರು, ಮಧ್ಯಾಹ್ನ ನಗರದ 42ನೇ ಎಸಿಎಂಎಂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಮುಂದೆ ಹಾಜರುಪಡಿಸಿದರು.

ವಾದ-ಪ್ರತಿವಾದ ಆಲಿಸಿ, ಒಂದು ಗಂಟೆಗಳ ಕಾಲ ತೀರ್ಪು ಕಾಯ್ದಿರಿಸಿ ನಂತರ ನ್ಯಾಯಾಧೀಶ ಕೆ.ಎನ್. ಶಿವಕುಮಾರ್, ಒಂದು ವಾರಗಳ ಕಾಲ ಎಸ್‌ಐಟಿ ಕಸ್ಟಡಿಗೆ ನೀಡಿದರು.

ಅಷ್ಟೇ ಅಲ್ಲ, ಪ್ರತಿನಿತ್ಯ ಬೆಳಗ್ಗೆ 9-30 ರಿಂದ 10-30 ರವರೆಗೆ ತಮ್ಮ ವಕೀಲರ ಭೇಟಿಗಾಗಿ ಪ್ರಜ್ವಲ್‌ಗೆ ಅವಕಾಶ ಮಾಡಿಕೊಟ್ಟಿದ್ದಾರೆ.

ಮನೆ ಊಟ ಹಾಗೂ ತಮ್ಮನ್ನು ಇರಿಸುವ ಕೊಠಡಿ ಸ್ವಚ್ಛತೆ, ಅಲ್ಲದೆ, ಮಾಧ್ಯಮಗಳು ತೀರ್ಪುಗಳನ್ನು ನೀಡದಂತೆ ನಿರ್ಬಂಧಿಸಬೇಕು ಎಂಬ ಪ್ರಜ್ವಲ್ ಮನವಿಯನ್ನು ನ್ಯಾಯಾಲಯ ಪುರಸ್ಕರಿಸಲಿಲ್ಲ.

ಇದಕ್ಕೂ ಮೊದಲು ಸರ್ಕಾರಿ ವಕೀಲರು ಮತ್ತು ಪ್ರಜ್ವಲ್ ವಕೀಲರು ತಮ್ಮತಮ್ಮ ವಾದಗಳನ್ನು ನ್ಯಾಯಾಲ ಯದ ಮುಂದೆ ಮಂಡಿಸಿದರು. ಪ್ರಜ್ವಲ್ ಅವರನ್ನು 15 ದಿನಗಳ ಕಸ್ಟಡಿಗೆ ಕೊಡಬೇಕು, ಇವರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ, ಅಪಹರಣ ಆರೋಪ ಪ್ರಕರಣಗಳಿವೆ. ಇವರು ಕಾನೂನು ಮಾಡುವವರು, ಇಂತಹವರನ್ನು ಹೊರಗಿಟ್ಟರೆ ತಮ್ಮ ಪ್ರಭಾವ ಬಳಸಿ ಸಾಕ್ಷ್ಯಗಳನ್ನು ನಾಶ ಪಡಿಸಬಹುದು ಎಂದು ವಾದಿಸಿದರು.

ಇವನೊಬ್ಬ ವಿಕೃತ ಕಾಮಿ ಎನಿಸುತ್ತದೆ, ಈತ ತುಂಬಾ ಡೇಂಜರ್ ಇದ್ದಾನೆ. ಸಂತ್ರಸ್ತ ಮಹಿಳೆ ಹೇಳಿಕೆ ಗಮನಿಸಿದರೆ ಅತ್ಯಾಚಾರ ಎಸಗಿದ್ದಾನೆ. ಹೆಚ್ಚು ಸಂತ್ರಸ್ತೆಯರಿದ್ದಾರೆ, ಮಾಧ್ಯಮಗಳಲ್ಲಿ ಸುದ್ದಿಯಾಗಬಾರದು ಎಂದು ತಡೆಯಾಜ್ಞೆ ತಂದಿದ್ದಾನೆ.

ವಿಡಿಯೋ ಮಾಡಿರುವ ಮೊಬೈಲ್ ಪತ್ತೆ ಮಾಡಬೇಕಿದೆ, ಹಲವು ಸಾಕ್ಷ್ಯಗಳ ಪತ್ತೆ ಆಗಬೇಕಿದೆ, ಈತ ದೇಶ ಬಿಟ್ಟು ಹೋಗಿದ್ದ, ವಾಪಸ್ ಬರುವ ಉದ್ದೇಶ ಇರಲಿಲ್ಲ, ಎಲ್ಲಾ ಕೋನಗಳಿಂದಲೂ ತನಿಖೆ ನಡೆಸಲು 15 ದಿನಗಳ ಕಸ್ಟಡಿಗೆ ನೀಡಿ ಎಂದು ಮನವಿ ಮಾಡಿದರು.

ಈತ ಸಾಮಾನ್ಯನಲ್ಲ, ತನಿಖೆ ಪೂರ್ಣಗೊಳ್ಳುವವರೆಗೂ ಜಾಮೀನು ನೀಡಬಾರದು ಎಂದು ಬಲವಾದ ವಾದ ಮಾಡಿದರು.

ಇದಕ್ಕೆ ಪ್ರತಿಯಾಗಿ ಪ್ರಜ್ವಲ್ ವಕೀಲರು, ಎಸ್‌ಐಟಿ ಅವರು ರೆಡಿಮೇಡ್ ದೂರು ದಾಖಲಿಸಿದ್ದಾರೆ, ಅವರನ್ನು ಬಂಧನದಲ್ಲಿ ವಿಚಾರಣೆಗೆ ಒಳಪಡಿಸುವ ಅಗತ್ಯವಿಲ್ಲ. ಎಸ್‌ಐಟಿ ಸಲ್ಲಿಸಿರುವುದು ಸಿದ್ಧಪಡಿಸಿದ ದೂರಿನಂತಿದೆ. ಪ್ರಜ್ವಲ್ ವಿರುದ್ಧ ದೂರು ನೀಡಿದ ಮಹಿಳೆಯ ವಿಡಿಯೋ ಮಾಡಿಲ್ಲ ಎಂದು ದೂರುದಾರರ ವಿಡಿಯೋಕ್ಕೆ ಸಂಬಂಧಿಸಿದ ಬೇರೆ ಪ್ರಕರಣಗಳನ್ನು ಉಲ್ಲೇಖಿಸಿದರು.

ದೂರುದಾರರು ಬಲವಾದ ಸಾಕ್ಷ್ಯಗಳನ್ನು ಒದಗಿಸಿಲ್ಲ. ಎಸ್‌ಐಟಿಗೆ 15 ದಿನಗಳ ಕಾಲ ವಶಕ್ಕೆ ನೀಡುವ ಅಗತ್ಯವೇ ಇಲ್ಲ ಎಂದು ಪ್ರಜ್ವಲ್ ವಕೀಲ ಅರುಣ್ ಬಲವಾಗಿ ವಾದ ಮಂಡಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಜೂನ್ 6ರವರೆಗೆ ಎಸ್‌ಐಟಿ ಕಸ್ಟಡಿಗೆ ನೀಡಿ ಆದೇಶಿಸಿದರು.

ಇದಕ್ಕೂ ಮುನ್ನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧನಕ್ಕೊಳಗಾದ ಪ್ರಜ್ವಲ್ ರೇವಣ್ಣ ಅವರನ್ನು ರಾತ್ರಿ ಸಿಐಡಿ ಕಚೇರಿ ಆವರಣದಲ್ಲಿರುವ ಎಸ್‌ಐಟಿ ಸೆಲ್‌ನಲ್ಲಿ ಇರಿಸಲಾಗಿತ್ತು.

ವಶಕ್ಕೆ ಪಡೆದ ನಂತರ ಅಧಿಕಾರಿಗಳು ಅವರನ್ನು ಯಾವುದೇ ವಿಚಾರಣೆಗೆ ಒಳಪಡಿಸಲಿಲ್ಲ. ಅವರನ್ನು ವಿದೇಶದಿಂದ ಬಂದ ಉಡುಪಿನಲ್ಲೇ ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು.

ವೈದ್ಯಕೀಯ ವರದಿ ಕೈತಲುಪಿದ ತಕ್ಷಣ ಪೊಲೀಸರು ಅವರನ್ನು ಬಿಗಿ ಬಂದೋಬಸ್ತ್‌ನಲ್ಲಿ ನಗರದ 42ನೇ ಎಸಿಎಂಎಂ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು.

ಪ್ರಜ್ವಲ್ ಪ್ರಬಲ ರಾಜಕೀಯ ಕುಟುಂಬದಿಂದ ಬಂದವರು ಮತ್ತು ಹಾಸನ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವವರು. ಹೀಗಾಗಿ ಸಿಐಡಿ ಕಚೇರಿ ಆವರಣ ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

ನ್ಯಾಯಾಲಯದ ಹೊರ ಆವರಣದಲ್ಲಿ ಭಾರೀ ಜನಜಂಗುಳಿಯಿತ್ತು. ಪ್ರಜ್ವಲ್‌ನ ಕರೆತರುವುದರಿಂದ ನ್ಯಾಯಾಲಯ ಪ್ರವೇಶಿಸುವ ರಸ್ತೆಯನ್ನು ಬ್ಲಾಕ್ ಮಾಡ ಲಾಗಿತ್ತು. ವಿಚಾರಣೆ ಸಂದರ್ಭದಲ್ಲೂ ನ್ಯಾಯಾಲಯ ಕಿಕ್ಕಿರಿದು ತುಂಬಿತ್ತು. ಅಷ್ಟೇ ಅಲ್ಲದೆ, ನ್ಯಾಯಾಲಯದ ಹೊರಗೂ ಜನರು ಕಿಕ್ಕಿರಿದು ಸೇರಿದ್ದರು.

ವಿಶೇಷವೆಂದರೆ ಪ್ರಜ್ವಲ್ ಅವರನ್ನು ಮಹಿಳಾ ಪೊಲೀಸ್ ಅಧಿಕಾರಿಗಳೇ ಬಂಧಿಸಿದ್ದಲ್ಲದೆ, ವೈದ್ಯಕೀಯ ಪರೀಕ್ಷೆ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸುವ ಕೆಲಸವನ್ನೂ ಮಾಡಿದರು.

ಶುಕ್ರವಾರ ಮುಂಜಾನೆ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಜ್ವಲ್ ಅವರನ್ನು ಭದ್ರತಾ ಸಿಬ್ಬಂದಿ ಹಾಗೂ ವಲಸೆ ಅಧಿಕಾರಿಗಳು ಅವರನ್ನು ನಿರ್ಗಮನದ ದ್ವಾರದಲ್ಲಿದ್ದ ಎಸ್‌ಐಟಿಯ ಐಪಿಎಸ್ ಅಧಿಕಾರಿ ಸುಮನ್ ಪನ್ನೇಕರ್ ನೇತೃತ್ವದ ತಂಡಕ್ಕೆ ಒಪ್ಪಿಸಿದರು.

ಭದ್ರತಾ ಸಿಬ್ಬಂದಿಯಿಂದ ವಶಕ್ಕೆ ಪಡೆಯುವ ಮುನ್ನ ಅಧಿಕಾರಿ ಪನ್ನೇಕರ್, ಆರೋಪಿ ಪ್ರಜ್ವಲ್ ಅವರಿಗೆ ವಾರೆಂಟ್ ತೋರಿಸಿ ವಶಕ್ಕೆ ತೆಗೆದುಕೊಂಡರು, ನಂತರ ಅವರನ್ನು ಪೊಲೀಸ್ ಜೀಪಿನಲ್ಲಿ ಕೂರಿಸಲಾಯಿತು.

ಈ ಸಂದರ್ಭದಲ್ಲಿ ಅಕ್ಕ-ಪಕ್ಕ ಹಾಗೂ ಹಿಂದೆ-ಮುಂದೆ ಮಹಿಳಾ ಪೊಲೀಸ್ ಅಧಿಕಾರಿಗಳೇ ಇದ್ದರು.

# ದವನ್ ಕಾಲೇಜು ವಿದ್ಯಾರ್ಥಿಗಳ ಬೀದಿ ನಾಟಕ




ದಾವಣಗೆರೆ, ಮೇ 31 - ನೋಡಿದ್ದು ಸುಳ್ಳಾಗಬಹುದು, ಕೇಳಿದ್ದು ಸುಳ್ಳಾಗಬಹುದು ವಿಚಾರಿಸಿ ಯೋಚಿಸಿದಾಗ ವಿಷಯ ತಿಳಿವುದು ಹೀಗೆ ಭೋರ್ಗರೆದ ದನಿ ಶುಕ್ರವಾರ ನಗರದ ರಾಮ್ ಅಂಡ್ ಕೋ ಸರ್ಕಲ್ ನಲ್ಲಿ ನೆರೆದಿದ್ದವರ ಮನಕ್ಕೆ ನಾಟಿತು ಎಂದರೆ ತಪ್ಪಾಗಲಾರದು.

ಹೌದು ! ನಗರದ ದವನ್ ಕಾಲೇಜು ವಿದ್ಯಾರ್ಥಿಗಳು ಇಂದು ರಾಮ್ ಅಂಡ್ ಕೋ ಸರ್ಕಲ್‌ನಲ್ಲಿ ಬೀದಿ ನಾಟಕ ಮಾಡುವ ಮೂಲಕ ಇಂದಿನ ಯುವ ಪೀಳಿಗೆಯಲ್ಲಿ ಅದರಲ್ಲೂ ವಿದೇಶ ವ್ಯಾಮೋಹದಿಂದ ದೇಶ ತೊರೆಯಲು ಹಾತೊರೆಯುವವರ ಮನ ಮಿಡಿಯುವಂತೆ ಬೀದಿ ನಾಟಕವನ್ನು ಪ್ರಸ್ತುತ ಪಡಿಸಿದರು.

ದಿಢೀರನೇ ಶ್ರೀಮಂತರಾಗಬೇಕೆನ್ನುವ ಹವಣಿಕೆಗೆ, ವಿದೇಶಿ ಕಂಪನಿಗಳಲ್ಲಿ ಪ್ರಕಟಿಸುವ ಸೌಲಭ್ಯ ಮತ್ತು ಪ್ಯಾಕೇಜ್‌ಗೆ ಮಾರು ಹೋದ ಯುವಕನೊಬ್ಬ ತನ್ನ ತಾಯಿಯ ಬಳಿ ವಿದೇಶದಲ್ಲಿ ನೌಕರಿ ಮಾಡುವ ಆಸೆಯನ್ನು ಹೇಳಿಕೊಳ್ಳುವ, ಮತ್ತು ಇದಕ್ಕಾಗಿ ಮಧ್ಯಮ ವರ್ಗದ ಆ ಕುಟುಂಬ ಇತರರೆಡೆಯಿಂದ ಸಾಲ ಮಾಡಿ ಮಗನನ್ನು ವಿದೇಶಕ್ಕೆ ಕಳಿಸುವ ಸನ್ನಿವೇಶ ಮನ ಕಲಕುವಂತಿತ್ತು. ಮಗ ವಿದೇಶದಲ್ಲಿ ನೆಲೆಗೊಂಡ ನಂತರ ಮಗನೊಂದಿಗೆ ಮಾತನಾಡಲು ಆತನ ಸ್ನೇಹಿತನ ಮೊಬೈಲ್‌ನಿಂದ ಮಾತನಾಡುವ ತಾಯಿ, ಕೆಲಸದ ಒತ್ತಡದಲ್ಲಿ ಸಿಡುಕುವ ಮಗ, ತಾಯಿಯ ಕ್ಷೇಮ-ಸಮಾಚಾರಕ್ಕೆ ಸ್ಪಂದಿಸದಿದ್ದಾಗ ಹಾಸಿಗೆ ಹಿಡಿದು ಒಂದು ದಿನ ಸಾವನ್ನಪ್ಪುತ್ತಾಳೆ. ಸ್ನೇಹಿತನಿಂದ ತಾಯಿಯ ಅಗಲಿಕೆಯ ಸುದ್ದಿ ತಿಳಿದ ಮಗನಿಗೆ ತಾಯಿಯ ಅಂತ್ಯ ಸಂಸ್ಕಾರದಲ್ಲಿ ಪಾಲ್ಗೊಳ್ಳಲು ತಾನು ದುಡಿಯುತ್ತಿರುವ ಕಂಪನಿ ನಿರಾಕರಿಸಿದಾಗ, ತನ್ನ ದೇಶ, ಭಾಷೆ, ಸಂಸ್ಕೃತಿಯನ್ನು ಬಿಟ್ಟು ಅನ್ಯ ದೇಶದಲ್ಲಿ ಬಂದು ತಪ್ಪು ಮಾಡಿದೆ ಎಂಬ ಭಾವ ಮೊಳೆಯುತ್ತದೆ. ಇಂತಹ ಒಂದು ಬೀದಿ ನಾಟಕ ಆಡಿದ ವಿದ್ಯಾರ್ಥಿಗಳು ತಾವು ಹೇಳಬೇಕೆಂದಿರುವ ವಿಷಯ ವನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ.

**'ವಿದೇಶದಲ್ಲಿ ಉದ್ಯೋಗವೇ' ಇಲ್ಲೊಂದು ಕಿವಿಮಾತಿದೆ ನೋಡಿ...!**

ಬೀದಿ ನಾಟಕದಲ್ಲಿ ಬಿಬಿಎ ಮೂರನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ದವನ್ ಕಾಲೇಜಿನ ಶ್ರೇಯಾ ಎಸ್. ರೇವಣಕರ್, ಶ್ರೀರಕ್ಷಾ, ಹರನ್ ಸುರ್ವೆ, ಮೊಹಮ್ಮದ್ ರಿಜ್ವಾನ್, ಸುಹಾಸ್, ಕಲ್ಲೇಶ್, ಭರತ್, ಗಂಗಮ್ಮ, ನೇಹಾ, ಉಲ್ಲಾಸ್, ಪೂರ್ಣಿಮಾ, ತಿಲಕ್, ಶಶಾಂಕ್ ಮತ್ತು ಅಭಿಜಿತ್ ಭಾಗವಹಿಸಿದ್ದರು.

# ಸೂರ್ಯನಿಗೆ ಅರ್ಘ್ಯ ಅರ್ಪಿಸಿದ ಪ್ರಧಾನಿ

ಕನ್ಯಾಕುಮಾರಿ, ಮೇ 31 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಶುಕ್ರವಾರದಂದು ಸೂರ್ಯ ಅರ್ಘ್ಯ ಕೈಗೊಂಡಿದ್ದಾರೆ. ಧ್ಯಾನ ಯಾತ್ರೆಯ ಎರಡನೇ ದಿನದಂದು ಅವರು ವಿವೇಕಾನಂದ ಶಿಲಾ ಸ್ಮಾರಕದಲ್ಲಿ ಬೆಳಿಗ್ಗೆ ಸೂರ್ಯನಿಗೆ ಪೂಜೆ ಸಲ್ಲಿಸಿದ್ದಾರೆ.

ಸೂರ್ಯನಿಗೆ ನಮನ ಸಲ್ಲಿಸುವ ವಿಡಿಯೋ ಒಂದನ್ನು ಪ್ರಧಾನಿ ಮೋದಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಪ್ರಧಾನಿ ಧ್ಯಾನ ಮಾಡುತ್ತಿರುವ ಚಿತ್ರಗಳನ್ನೂ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ.



# ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತುಗಳು ನನ್ನ ಕಕ್ಷಿದಾರರಾದ ಶ್ರೀಮತಿ ಸಾವಿತ್ರಮ್ಮ ಬಾಳೆಕಾಯಿ ಗಂಡ ಡಾ: ಸಿ.ಪಿ. ಬಾಳಿಕಾಯಿ, ಹಾಲಿ ವಾಸ ನಂ.233, ಮುಖ್ಯ ರಸ್ತೆ, ಆರ್.ಎಮ್.ವಿ. 2ನೇ ಹಂತ, ಡಾಲರ್ಸ್ ಕಾಲೊನಿ, ಬೆಂಗಳೂರು-560094, ಇವರಿಗೆ ಇವರ ಖಾಸಾ ತಮ್ಮನಾದ ಲೇಟ್ ಪಿ.ಸಿದ್ದನಗೌಡ ತಂದೆ ಲೇಟ್ ರಾಮಲಿಂಗನಗೌಡ, ಹಿರೇಮೇಗಳಗೆರೆ, ಹರಪನಹಳ್ಳಿ ತಾಲ್ಲೂಕು ಇವರು ದಿನಾಂಕ: 12.05.2023 ರಂದು ವಿಲ್ ಯಾನೆ ಮರಣ ಶಾಸನದ ಮೂಲಕ ಬಂದಿರುತ್ತವೆ. ಸದರಿ ವಿಲ್ ಯಾನೆ ಮರಣ ಶಾಸನ ಪತ್ರ ಬೆಂಗಳೂರಿನ ಶಿವಾಜಿ ನಗರ (ಇಂದಿರಾನಗರ)ದ ಹಿರಿಯ ಉಪ ನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿಯಾಗಿದ್ದು ಅದರ ಸಂ.INR-3- 00074-2023-24 ಎಂದು ದಾಖಲಾಗಿರುತ್ತದೆ. ಆದರೆ ಈಗ ಸದರಿ ಸ್ವತ್ತುಗಳ ಸಂಬಂಧ ಪಿ.ಸಿದ್ದನಗೌಡ ಇವರ ಹೆಂಡತಿಯಾದ ಭಾಗ್ಯ ಪಾಟೀಲ್ ಎನ್ನುವವರು ಅಕ್ರಮವಾಗಿ/ ಕಾನೂನುಬಾಹಿರವಾಗಿ ಮಾರಾಟ ಮಾಡಲು ಹುನ್ನಾರ ನಡೆಸಿರುವುದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿದೆ.

ಸದರಿ ಭಾಗ್ಯ ಪಾಟೀಲ್ ಇವರಿಗೆ ಷೆಡ್ಯೂಲ್ ಸ್ವತ್ತುಗಳ ಸಂಬಂಧ ಯಾವುದೇ ಹಕ್ಕು, ಆಸಕ್ತಿ ಇಲ್ಲದಿದ್ದರೂ ನನ್ನ ಕಕ್ಷಿದಾರರಿಗೆ ನಷ್ಟ ಉಂಟುಮಾಡಲು ಮಾರಾಟದ ಹುನ್ನಾರ ನಡೆಸಿರುತ್ತಾರೆ. ಪ್ರಯುಕ್ತ ಈ ಸಂಬಂಧ ಸದರಿ ಭಾಗ್ಯ ಪಾಟೀಲ್ ಇವರೊಂದಿಗೆ ಯಾವುದೇ ವ್ಯವಹಾರ ಮಾಡಬಾರದೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ಆಕಸ್ಮಾತ್ ಅಂತಹ ಕಾನೂನು ಬಾಹಿರ ವ್ಯವಹಾರ ಮಾಡಿದಲ್ಲಿ ಅದಕ್ಕೆ ಅಂತಹವರೇ ಹೊಣೆಗಾರರಾಗುತ್ತಾರೆ. ಮತ್ತು ನನ್ನ ಕಕ್ಷಿದಾರರು ಜವಾಬ್ದಾರರಾಗುವುದಿಲ್ಲ.

**ಷೆಡ್ಯೂಲ್**

1. ಹರಪನಹಳ್ಳಿ ತಾಲ್ಲೂಕು, ಹಿರೇಮೇಗಳಗೆರೆ ಗ್ರಾಮದ ಸ.ನಂ 435/ಸಿ, ರಲ್ಲಿಯ 2 ಎಕರೆ 46 ಸೆಂಟ್ ಜಮೀನಿಗೆ **ಚಕ್ಕು ಬಂದಿ: ಪೂರ್ವ:** ಎಸ್.ಎಮ್.ಶಿವಮೂರ್ತಿಯವರ ಸ್ವತ್ತು. **ಪಶ್ಚಿಮ** : ಹೆಚ್.ರಾಮಲಿಂಗಪ್ಪನವರ ಸ್ವತ್ತು, **ಉತ್ತರ** : ಸ.ನಂ.407ಬಿ, ಸತ್ತೂರು ದೊಡ್ಡಪ್ಪ ಮತ್ತು ಕಾಲುವೆ. **ದಕ್ಷಿಣ** : ಆಲೂರು ಬಸವನಗೌಡ
2. ಹರಪನಹಳ್ಳಿ ತಾಲ್ಲೂಕು, ಹಿರೇಮೇಗಳಗೆರೆ ಗ್ರಾಮದಲ್ಲಿಯ ಒಂದೇ ಬೌಂಡರಿ ಹೊಂದಿರುವ, ಸ.ನಂ 436 ರಲ್ಲಿಯ 47 ಸೆಂಟ್, ಸ.ನಂ 437ಬಿ ಯಲ್ಲಿ 1ಎಕರೆ 71ಸೆಂಟ್, ಸ.ನಂ.438 ರಲ್ಲಿಯ 88 ಸೆಂಟ್. ಸ.ನಂ.439ರಲ್ಲಿಯ 6 ಎಕರೆ 44 ಸೆಂಟ್ ಜಮೀನುಗಳಿಗೆ **ಚಕ್ಕು ಬಂದಿ : ಪೂರ್ವ:** ಸ.ನಂ. 434ಎ ಮತ್ತು ಬಿ.ಯಲ್ಲಿ ಆಲೂರು ಬಸವನಗೌಡ ಇವರ ಸ್ವತ್ತು, **ಪಶ್ಚಿಮ** : ದಾವಣಗೆರೆ ರಸ್ತೆ, **ಉತ್ತರ** : ಸ.ನಂ. 442, 443, 444 ಮತ್ತು 440ಎ., **ದಕ್ಷಿಣ** : ಸ.ನಂ.435 ಎ ಮತ್ತು ಬಿ, 435/ಸಿ ಮತ್ತು ಡಿ.
3. ಹರಪನಹಳ್ಳಿ ತಾಲ್ಲೂಕು, ಹಿರೇಮೇಗಳಗೆರೆ ಗ್ರಾಮದಲ್ಲಿಯ, ಸ.ನಂ 399/ಬಿ2 ರಲ್ಲಿಯ 10 ಸೆಂಟ್, ಜಮೀನಿಗೆ **ಚಕ್ಕು ಬಂದಿ : ಪೂರ್ವ** : ಸ.ನಂ. 398ಸಿ ರಲ್ಲಿ ಗೌಡರ ರೇಣಸಿದ್ದಪ್ಪ ಇವರ ಸ್ವತ್ತು, **ಪಶ್ಚಿಮ** : ಸ.ನಂ, 440ಎ ಯಲ್ಲಿ ಬಸೆಟ್ಟಿ ಮಹಾದೇವಪ್ಪನವರ ಸ್ವತ್ತು, **ಉತ್ತರ** : ಭದ್ರಾ ಕಾಲುವೆ, **ದಕ್ಷಿಣ** : ಶ್ರೀಕಂಠಾಪುರ ರಸ್ತೆ
4. ಹರಪನಹಳ್ಳಿ ತಾಲ್ಲೂಕು, ಲಕ್ಷ್ಮೀಪುರ ಗ್ರಾಮದಲ್ಲಿಯ, ಸ.ನಂ 74 ರಲ್ಲಿಯ 9 ರಲ್ಲಿಯ 70 ಸೆಂಟ್, ಜಮೀನಿಗೆ **ಚಕ್ಕು ಬಂದಿ : ಪೂರ್ವ:** ಸತ್ತೂರು ದೊಡ್ಡಪ್ಪ ರಸ್ತೆ ಮತ್ತು ಸ.ನಂ.73 ರಲ್ಲಿ ಎಮ್.ರುದ್ರಪ್ಪನವರ ಸ್ವತ್ತು, **ಪಶ್ಚಿಮ** : ಕಾಲುವೆ, **ಉತ್ತರ** : ಸತ್ತೂರು ದೊಡ್ಡಪ್ಪ ರಸ್ತೆ. **ದಕ್ಷಿಣ** : ಸ.ನಂ. 108 ರಲ್ಲಿಯ ಗಿಡ್ಡಣ್ಣಳ್ ಹಾಲಪ್ಪ ಇವರ ಸ್ವತ್ತು,
5. ಹರಪನಹಳ್ಳಿ ತಾಲ್ಲೂಕು, ಹಿರೇಮೇಗಳಗೆರೆ ಗ್ರಾಮದ ಸ.ನಂ 435/ಸಿ, ರಲ್ಲಿಯ 1ಎಕರೆ 46 ಸೆಂಟ್ ಜಮೀನಿಗೆ **ಚಕ್ಕು ಬಂದಿ : ಪೂರ್ವ:** ಇದೇ ಸ.ನಂ. ನಲ್ಲಿ ಭಾಗ್ಯ ಪಾಟೀಲ್ ಇವರಿಗೆ ಬಂದಿರುವ 1ಎಕರೆ ಜಮೀನು, **ಪಶ್ಚಿಮ** : ಹೆಚ್. ರಾಮಲಿಂಗಪ್ಪನವರ ಸ್ವತ್ತು, **ಉತ್ತರ** : ಸ.ನಂ.407ಬಿ, ಸತ್ತೂರು ದೊಡ್ಡಪ್ಪ ಮತ್ತು ಕಾಲುವೆ. **ದಕ್ಷಿಣ** : ಆಲೂರು ಬಸವನಗೌಡ
6. ದಾವಣಗೆರೆ ಸಿಟಿ, ಜಯನಗರ 'ಬಿ' ಬ್ಲಾಕ್ ನಲ್ಲಿರುವ ನಿವೇಶನ ಸಂ.404/99 ರಲ್ಲಿ, 50x40 ವಿಸ್ತೀರ್ಣದಲ್ಲಿ ಕಟ್ಟಿರುವ ನೆಲ ಮಹಡಿ ಮತ್ತು 1ನೇ ಮಹಡಿಯಲ್ಲಿ ನೆಲ ಮಹಡಿ.
7. ದಾವಣಗೆರೆ ಸಿಟಿ, ಭೂಮಿಕಾ ನಗರದಲ್ಲಿರುವ ನಿವೇಶನ ಸಂ.4 ರಲ್ಲಿಯ 50×40 ಅಳತೆಯ ನಿವೇಶನ.
8. ಟ್ರೇಲರ್ ಸಮೇತ ದಾವಣಗೆರೆಯಲ್ಲಿ ನೋಂದಣಿಯಾಗಿರುವ ಸಂ.ಕೆ.ಎ.17 ಟಿಡಿ7899 ಉಳ್ಳ ಒಂದು ಟ್ರಾಕ್ಟರ್.
9. ದಾವಣಗೆರೆಯಲ್ಲಿ ನೋಂದಣಿಯಾಗಿರುವ ಸಂ.ಕೆ.ಎ.14ಪಿ6112 ಉಳ್ಳ ಒಂದು ಟೊಯೊಟಾ ಇನ್ನೋವ ಕಾರ್

**ವಕೀಲರು (ಎಮ್.ಸಿದ್ದಯ್ಯ)**

ಸ್ಥಳ: ದಾವಣಗೆರೆ
ದಿನಾಂಕ : 01.06.2024

KAR. 12/2007 ಡೋರ್. ನಂ. 1965/36, 3ನೇ ಕ್ರಾಸ್, ವಿನಾಯಕ ಬಡಾವಣೆ, ವಿದ್ಯಾನಗರ, ದಾವಣಗೆರೆ-05. **ಮೊ : 99803 76127**



# ಹತ್ತು ವರ್ಷಗಳಲ್ಲಿ 10 ಲಕ್ಷ ಕೋಟಿ ರೂ. ಕೆಟ್ಟ ಸಾಲ ವಸೂಲಿ : ಸೀತಾರಾಮನ್

## ಒಬ್ಬ ಉದ್ಯಮಿಯ ಸಾಲವನ್ನೂ ಮನ್ನಾ ಮಾಡಿಲ್ಲ

ನವದೆಹಲಿ, ಮೇ 31 – ಮೋದಿ ಸರ್ಕಾರ ಬ್ಯಾಂಕಿಂಗ್ ವಲಯದಲ್ಲಿ ಸುಧಾರಣೆ ಮಾಡಿದೆ. ಕಳೆದ ಹತ್ತು ವರ್ಷಗಳಲ್ಲಿ 10 ಲಕ್ಷ ಕೋಟಿ ರೂ.ಗಳ ಕೆಟ್ಟ ಸಾಲ ವಸೂಲಿ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಜಾರಿ ನಿರ್ದೇಶನಾಲಯ, 1,105 ಬ್ಯಾಂಕ್ ವಂಚನೆ ಪ್ರಕರಣಗಳ ತನಿಖೆ ನಡೆಸುತ್ತಿದೆ. ಇದರಿಂದಾಗಿ 64,920 ಕೋಟಿ ರೂ.ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದೂ ಅವರು ಹೇಳಿದ್ದಾರೆ.

ಇತ್ತೀಚೆಗೆ ಬ್ಯಾಂಕಿಂಗ್ ವಲಯ ಮಹತ್ವದ ಸಾಧನೆ ಮಾಡಿದ್ದು, ಅದರ ಲಾಭ 3 ಲಕ್ಷ ಕೋಟಿ ರೂ. ದಾಟಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನಿರ್ಣಾಯಕ ನೇತೃತ್ವದಲ್ಲಿ ಈ ಬೆಳವಣಿಗೆಯಾಗಿದೆ ಎಂದು ಸೀತಾರಾಮನ್ ತಿಳಿಸಿದ್ದಾರೆ. ಕೆಟ್ಟ ಸಾಲ ವಸೂಲಿ ಮಾಡುವಲ್ಲಿ ಯಾವುದೇ ದಾಕ್ಷಿಣ್ಯ ತೋರುತ್ತಿಲ್ಲ. ದೊಡ್ಡ ಪ್ರಮಾಣದಲ್ಲಿ ಬಾಕಿದಾರರಿಂದ ಸಾಲ ವಸೂಲಿ ನಡೆಯುತ್ತಿದೆ. 2014ಕ್ಕೆ ಮುಂಚೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ ಬ್ಯಾಂಕಿಂಗ್ ವಲಯ ಕೆಟ್ಟ ಸಾಲ, ಸ್ವಹಿತಾಸಕ್ತರು, ಭ್ರಷ್ಟಾಚಾರ ಹಾಗೂ ದುರಾಡಳಿತದ ತಾಣವಾಗಿತ್ತು ಎಂದವರು ಆರೋಪಿಸಿದರು.

ಪ್ರತಿಪಕ್ಷಗಳ ನಾಯಕರಿಗೆ ಈಗಲೂ ರೈಟಫ್ ಹಾಗೂ ಮನ್ನಾ ನಡುವಿನ ವ್ಯತ್ಯಾಸ ಅರ್ಥವಾಗದೇ ಇರುವುದು ಶೋಚನೀಯ. ರೈಟಫ್‌ಗಳ ನಂತರ ಬ್ಯಾಂಕುಗಳು ಕೆಟ್ಟ ಸಾಲ ವಸೂಲಿಯಲ್ಲಿ ಸಕ್ರಿಯವಾಗಿ ತೊಡಗಿವೆ. ಯಾವುದೇ ಉದ್ಯಮಿಗೆ ನೀಡಿದ ಸಾಲ ಮನ್ನಾ ಮಾಡಿಲ್ಲ. 2014ರಿಂದ 2023ರ ನಡುವೆ ಬ್ಯಾಂಕುಗಳು 10 ಲಕ್ಷ ಕೋಟಿ ರೂ.ಗಳ ಕೆಟ್ಟ ಸಾಲ ವಸೂಲಿ ಮಾಡಿವೆ ಎಂದವರು ಹೇಳಿದ್ದಾರೆ. ಈ ಹಿಂದೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ ನಿಷ್ಕ್ರಿಯ ಆಸ್ತಿಗಳ ಬೀಜ ಬಿತ್ತಲಾಗಿತ್ತು. ಆ ಸಂದರ್ಭದಲ್ಲಿ, ಯುಪಿಎ ನಾಯಕರ ಒತ್ತಡದ ಕಾರಣದಿಂದ ಅನರ್ಹರಿಗೆ ಸಾಲ ನೀಡಲಾಗಿತ್ತು ಎಂದು ಸೀತಾರಾಮನ್ ಆರೋಪಿಸಿದ್ದಾರೆ.


**Format C-1**

Declaration about criminal cases
(As per the judgment dated 25th September, 2018 of Hon'ble Supreme Court in WP (Civil) No. 536 of 2011 (Public Interest Foundation & Vs. Union of India & Anr.)
Name and address of candidate: **Dr. G H IMRAPUR**
# 265, IMRAPUR BUILDING, 80 FEET ROAD, 5TH BLOCK, ANJANAPUR, BANGALORE - 560108
Name of political party: Independent
(Independent candidates should write "Independent" here)
Name of Election : **Biennial Election to the Karnataka Legislative Council**
Name of Constituencys: **Karnataka South East Teachers Constituency**
**1. Dr. G H IMRAPUR** (name of candidate), a candidate for the above mentioned election, declare for public Information the following details about my criminal antecedent:

(A) Penditg criminal cases

| Sl No | Name of Court | Case No. and dated | status of case(s) | Section(s) of Acts concerned and brief description of offence(s) |
|---|---|---|---|---|
| 1 | JMFC Muddebihal | 146/2016 | Evidence stage | False case filed by my own sister's husband filed false case When I went to attend relative marriage ceremony at Muddebihal |

(B) Details about cases of conviction for criminal offences

| Sl No | Name of Court & date(s) of order(s) | Description of offence(s) & punishment Imposed | Maximum Punishment Imposed |
|---|---|---|---|
| NOT APPLE CABLE | | | |

• In the case of election to Council of States or election to Legislative Council by MLAs, mention the election concerned in place of name of constituency.


# ಕಾರಿಗನೂರು ಹಲಗೇರಿ ಗಣೇಶಪ್ಪ ನಿಧನ



ಚನ್ನಗಿರ ತಾಲ್ಲೂಕು ಕಾರಿಗನೂರು ಗ್ರಾಮದ ವಾಸಿ ಹಲಗೇರಿ ಗಣೇಶಪ್ಪ (64) ಇವರು ದಿನಾಂಕ 31.05.2024ರ ಶುಕ್ರವಾರ ರಾತ್ರಿ 7.56ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 1.06.2024ರ ಶನಿವಾರ ಮಧ್ಯಾಹ್ನ 1ಕ್ಕೆ ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಚಂಡಮಾರುತ ಹಾನಿಯ ವಿವರ ಪಡೆದ ಪ್ರಧಾನಿ ಮೋದಿ

ನವದೆಹಲಿ, ಮೇ 31 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರೆಮಲ್ ಚಂಡಮಾರುತದಿಂದ ಹಲವು ರಾಜ್ಯಗಳಲ್ಲಿ ಆಗಿರುವ ಪರಿಣಾಮಗಳ ವಿವರ ಪಡೆದಿದ್ದಾರೆ.

ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ತ್ರಿಪುರ ಹಾಗೂ ಪಶ್ಚಿಮ ಬಂಗಾಳಗಳಲ್ಲಿ ಚಂಡಮಾರುತದ ನಂತರ ಸಂಭವಿಸಿರುವ ನೈಸರ್ಗಿಕ ವಿಕೋಪ ದುರಾದೃಷ್ಟಕರ. ಈ ವಿಕೋಪದಿಂದ ಪೀಡಿತವಾದ ವರಿಗಾಗಿ ಪ್ರಾರ್ಥಿಸುತ್ತೇವೆ ಹಾಗೂ ಅವರ ಜೊತೆ ಇರುತ್ತೇವೆ ಎಂದಿದ್ದಾರೆ.

ಪರಿಸ್ಥಿತಿಯ ವಿವರಗಳನ್ನು ಪಡೆಯಲಾಗಿದೆ. ಸರ್ಕಾರದಿಂದ ಸಾಧ್ಯವಿರುವ ಎಲ್ಲಾ ನೆರವು ನೀಡಲಾಗುವುದು. ಪರಿಸ್ಥಿತಿಯ ಮೇಲೆ ನಿಗಾ ವಹಿಸಲಾಗುವುದು ಎಂದು ಹೇಳಿದ್ದಾರೆ.

ಕನ್ಯಾಕುಮಾರಿಯಲ್ಲಿ ಧ್ಯಾನ ಯಾತ್ರೆ ಕೈಗೊಂಡಿರುವ ಪ್ರಧಾನಿಗೆ, ಗೃಹ ಸಚಿವ ಅಮಿತ್ ಷಾ ಅವರು ಪರಿಸ್ಥಿತಿಯ ವಿವರ ನೀಡಿದ್ದಾರೆ.

# ಮತದಾನೋತ್ತರ ಸಮೀಕ್ಷೆ ಚರ್ಚೆಯಲ್ಲಿ ಪಾಲ್ಗೊಳ್ಳದಿರಲು ಕಾಂಗ್ರೆಸ್ ನಿರ್ಧಾರ

ನವದೆಹಲಿ, ಮೇ 31 – ಮತದಾನೋತ್ತರ ಸಮೀಕ್ಷೆಗಳ ಕುರಿತು ಟಿವಿ ವಾಹಿನಿಗಳಲ್ಲಿ ನಡೆಯುವ ಚರ್ಚೆಗಳಲ್ಲಿ ಭಾಗಿಯಾಗದಿರಲು ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ. ಟಿ.ಆರ್.ಪಿ.ಗಾಗಿ ನಡೆಯುವ ಊಹಾತ್ಮಕ ಚರ್ಚೆ ಹಾಗೂ ಕೆಸರೆರೆಚಾಟದಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಕಾಂಗ್ರೆಸ್ ವಕ್ತಾರ ಹಾಗೂ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರ ತಿಳಿಸಿದ್ದಾರೆ. ಜನರು ಮತದಾನ ಮಾಡಿದ್ದಾರೆ ಹಾಗೂ ಅವರ ತೀರ್ಪು ಸುರಕ್ಷಿತವಾಗಿದೆ. ಜೂನ್ 4ರಂದು ಫಲಿತಾಂಶ ಬರಲಿದೆ. ಅದಕ್ಕೂ ಮುಂಚೆ ಟಿ.ಆರ್.ಪಿ.ಗಾಗಿ ನಡೆಯುವ ಊಹಾಪೋಹ ಹಾಗೂ ಕೆಸೆರೆಚಾಟದಲ್ಲಿ ಪಾಲ್ಗೊಳ್ಳುವುದರಲ್ಲಿ ಅರ್ಥವಿಲ್ಲ ಎಂದಿದ್ದಾರೆ.

# ವಿಧಾನ ಪರಿಷತ್ ಚುನಾವಣೆ : ಜಿಲ್ಲಾ ಸಹಾಯವಾಣಿ ಕೇಂದ್ರ

ದಾವಣಗೆರೆ, ಮೇ 31 - ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ಜೂನ್ 3 ರಂದು ಚುನಾವಣೆ ನಡೆಯುತ್ತಿದ್ದು ಮತದಾರರ ಸಹಾಯಕ್ಕೆ ಸಹಾಯವಾಣಿ ಸ್ಥಾಪಿಸಲಾಗಿದೆ. ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿನ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ದಾವಣಗೆರೆ, ಹರಿಹರ ಮತ್ತು ಜಗಳೂರು ತಾಲ್ಲೂಕುಗಳ ಶಿಕ್ಷಕ ಮತದಾರರು ಹಾಗೂ ಕರ್ನಾಟಕ ನೈರುತ್ಯ ಪದವೀಧರರ ಕ್ಷೇತ್ರ ಮತ್ತು ನೈರುತ್ಯ ಶಿಕ್ಷಕರ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಚನ್ನಗಿರಿ, ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳ ಮತದಾರರಿಗೆ ಸಹಕರಿಸುವ ನಿಟ್ಟಿನಲ್ಲಿ ಜಿಲ್ಲಾ ಸಹಾಯವಾಣಿ ಕೇಂದ್ರ 24x7 ಕಾರ್ಯನಿರ್ವಹಿಸಲು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತೆರೆಯಲಾಗಿದೆ. ಮತದಾರರಿಗೆ ಅಗತ್ಯವಿರುವ ಮಾಹಿತಿಯನ್ನು ಟೋಲ್ ಫ್ರೀ 18004 250380 ಸಂಖ್ಯೆಗೆ ಕರೆ ಮಾಡಿ ಮಾಹಿತಿ ಪಡೆಯಬಹುದೆಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ತಿಳಿಸಿದ್ದಾರೆ.

# ಸರ್ಕಾರಿ ಶಾಲಾ ಮಕ್ಕಳಿಗೆ ಸಿಹಿ ಊಟದ ಸ್ವಾಗತ



ದಾವಣಗೆರೆ, ಮೇ 31- ಬಾಳೆಕಂದು, ತಳಿರು ತೋರಣಗಳಿಂದ ಸಿಂಗಾರಗೊಂಡಿದ್ದ ಸರ್ಕಾರಿ ಶಾಲೆಗಳಲ್ಲಿ ಶುಕ್ರವಾರ ಮಕ್ಕಳನ್ನು ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಕಳೆದ ಬುಧವಾರವೇ ಮಕ್ಕಳು ಶಾಲೆಗೆ ಬರಲಾರಂಭಿಸಿದ್ದರಾದರೂ ಸಹ, ಇಂದು ಸ್ವಾಗತಿಸಲಾಯಿತು.

ಶಾಲೆಗಳಲ್ಲಿ ಬಿಸಿಯೂಟದ ಜೊತೆ ಮಕ್ಕಳಿಗಾಗಿ ವಿಶೇಷವಾಗಿ ಸಿಹಿ ಊಟ ನೀಡಲಾಯಿತು. ನಿಟುವಳ್ಳಿ ಸರ್ಕಾರಿ ಶಾಲೆಯಲ್ಲಿ ಲಾಡು ಮಾಡಲಾಗಿತ್ತು. ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ಪಠ್ಯ-ಪುಸ್ತಕ, ಸಮವಸ್ತ್ರ ವಿತರಿಸಲಾಯಿತು.

ಕಳೆದ ಎರಡು ದಿನಗಳಿಗಿಂತ ಇಂದು ಆಗಮಿಸಿದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿತ್ತು. ಒಂದೂವರೆ ತಿಂಗಳ ಬೇಸಿಗೆ ರಜೆಯ ನಂತರ ಶಾಲೆಗೆ ಮರಳಿದ ಮಕ್ಕಳಲ್ಲಿ ಸಹಪಾಠಿಗಳನ್ನು ಮತ್ತೆ ಭೇಟಿ ಮಾಡಿದ ಸಂಭ್ರಮವಿತ್ತು.

ಮೇ 31ರಿಂದ ಜೂನ್ 30ರವರೆಗೆ ಶಾಲೆಗಳಿಗೆ ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುತ್ತದೆ. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗಳಿಗೆ ಕರೆತರಲು ಅಭಿಯಾನ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ 1,201 ಸರ್ಕಾರಿ ಶಾಲೆಗಳು, 312 ಅನುದಾನಿತ, 464 ಅನುದಾನ ರಹಿತ, ಸಮಾಜ ಕಲ್ಯಾಣ ಇಲಾಖೆಯ 35 ಶಾಲೆಗಳು ಹಾಗೂ ಎರಡು ಕೇಂದ್ರೀಯ ಶಾಲೆಗಳು ಸೇರಿ ಒಟ್ಟು 2014 ಶಾಲೆಗಳಿವೆ. ಸಮವಸ್ತ್ರ ಹಾಗೂ ಪಠ್ಯ ಪುಸ್ತಕಗಳ ಹಂಚಿಕೆ ಬಹುತೇಕ ಪೂರ್ಣಗೊಂಡಿದೆ.

ಡಿಡಿಪಿಐ ಕೊಟ್ರೇಶ್ ಅವರು ನಿಟುವಳ್ಳಿ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಸಮವಸ್ತ್ರ, ಪಠ್ಯ ಪುಸ್ತಕದೊ ಜೊತೆ ಹೂ ನೀಡಿ ಮಕ್ಕಳನ್ನು ಸ್ವಾಗತಿಸುವ ಮೂಲಕ ಶಾಲಾ ಪ್ರಾರಂಭೋತ್ಸವಕ್ಕೆ ಚಾಲನೆ ನೀಡಿದರು.

ಸಿಆರ್‌ಪಿ ವಿಷಯ ಪರಿವೀಕ್ಷಕ ಹೆಚ್.ಎಂ. ಸುರೇಶ್, ಸ್ವಾಮಿ, ಶಿಕ್ಷಕರಾದ ಜಯಪ್ಪ, ಅಜಯ್ ನಾರಾಯಣ್, ಸೇವಾದಳ ಸಂಘಟಕ ಪಕ್ಕೀರ್ ಗೌಡ ಶಾಲಾ ಸಿಬ್ಬಂದಿಗಳು, ಎಸ್‌ಡಿಎಂಸಿ ಸದಸ್ಯರು ಈ ಸಂದರ್ಭದಲ್ಲಿದ್ದರು.

ಇದೇ ಸಂದರ್ಭದಲ್ಲಿ ಅಕ್ಷರದಾಸೋಹ ಶಿಕ್ಷಣಾಧಿಕಾರಿಗಳು ಡಿ.ದುರುಗಪ್ಪ ನವರು ದಾನಿಗಳಿಂದ ಸಂಗ್ರಹಿಸಿದ್ದ ಅಡುಗೆ ಪರಿಕರಗಳನ್ನು ಉದ್ಘಾಟಿಸಿದರು.


## ಲೋಕ : ಇಂದು ಕೊನೆ ಹಂತದ ಚುನಾವಣೆ

ನವದೆಹಲಿ, ಮೇ 31 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಸ್ಪರ್ಧಿಸಿರುವ ವಾರಣಾಸಿ ಸೇರಿದಂತೆ, 57 ಲೋಕಸಭಾ ಕ್ಷೇತ್ರಗಳಿಗೆ ಶನಿವಾರ ಚುನಾವಣೆ ನಡೆಯಲಿದೆ. ಇದು ಕೊನೆಯ ಹಂತದ ಚುನಾವಣೆಯಾಗಿದೆ.

ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಹಿಮಾಚಲ ಪ್ರದೇಶ, ಜಾರ್ಖಂಡ್, ಒಡಿಶಾ, ಪಂಜಾಬ್ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಚಂಡೀಘಡ ಸೇರಿದಂತೆ, ಏಳು ರಾಜ್ಯಗಳ 57 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ. ಇದೇ ವೇಳೆ ಒಡಿಶಾ ವಿಧಾನಸಭೆಯ ಉಳಿದಿರುವ 42 ವಿಧಾನಸಭಾ ಕ್ಷೇತ್ರಗಳಿಗೂ ಚುನಾವಣೆ ನಡೆಯಲಿದೆ. ಇದರೊಂದಿಗೆ ಏಪ್ರಿಲ್ 19ರಿಂದ ಆರಂಭವಾದ ಏಳು ಹಂತಗಳ ಲೋಕಸಭಾ ಚುನಾವಣೆಗೆ ತೆರೆ ಬೀಳಲಿದೆ.

ಇದುವರೆಗೂ 28 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ 486 ಕ್ಷೇತ್ರಗಳಿಗೆ ಚುನಾವಣೆ ಪೂರ್ಣಗೊಂಡಿದೆ. ಜೂನ್ 4ರಂದು ಮತ ಎಣಿಕೆ ನಡೆಯಲಿದೆ.




## ವಿದೇಶಿ ನೇರ ಹೂಡಿಕೆ ಶೇ.3.49ರಷ್ಟು ಇಳಿಕೆ

ನವದೆಹಲಿ, ಮೇ 31 – 2023-24ರಲ್ಲಿ ವಿದೇಶಿ ನೇರ ಹೂಡಿಕೆ ಶೇ.3.49 ರಷ್ಟು ಇಳಿಕೆಯಾಗಿದ್ದು, 44.42 ಶತಕೋಟಿ ಡಾಲರ್‌ಗಳಿಗೆ ಸೀಮಿತವಾಗಿದೆ. ಕಂಪ್ಯೂಟರ್ ಹಾರ್ಡ್‌ವೇರ್ - ಸಾಫ್ಟ್‌ವೇರ್, ಟೆಲಿಕಾಂ, ಆಟೋ ಹಾಗೂ ಫಾರ್ಮಾ ಮತ್ತಿತರೆ ವಲಯಗಳಲ್ಲಿ ಕಡಿಮೆ ಹೂಡಿಕೆಯಾಗಿರುವುದು ಇದಕ್ಕೆ ಕಾರಣ. 2022-23ರಲ್ಲಿ ವಿದೇಶಿ ನೇರ ಹೂಡಿಕೆಯ ಪ್ರಮಾಣ 46.03 ಶತಕೋಟಿ ಡಾಲರ್ ಆಗಿತ್ತು. 2021-22ರಲ್ಲಿ 84.83 ಶತಕೋಟಿ ಡಾಲರ್‌ಗಳ ನೇರ ಹೂಡಿಕೆ ದೊರೆತಿತ್ತು.

## ಜಿ.ಡಿ.ಪಿ. ಶೇ.7.8ರಷ್ಟು ಏರಿಕೆ

ನವದೆಹಲಿ, ಮೇ 31 – ಭಾರತದ ಜಿ.ಡಿ.ಪಿ. ಕಳೆದ ಜನವರಿ - ಮಾರ್ಚ್ ಚತುರ್ಥದಲ್ಲಿ ಶೇ.7.8ರಷ್ಟು ಏರಿಕೆ ಕಂಡಿದೆ. ಉತ್ಪಾದನಾ ವಲಯದಲ್ಲಿ ಆಗಿರುವ ಬೆಳವಣಿಗೆ ಇದಕ್ಕೆ ಕಾರಣವಾಗಿದೆ.

ಇದರಿಂದಾಗಿ ವಾರ್ಷಿಕ ಬೆಳವಣಿಗೆ ದರ ಶೇ.8.2ಕ್ಕೆ ತಲುಪಿದೆ. ಕಳೆದ 2022-23ರ ಸಾಲಿನಲ್ಲಿ ಆರ್ಥಿಕತೆ ಶೇ.7ರ ಬೆಳವಣಿಗೆ ಕಂಡಿತ್ತು.

## ವಿಶ್ವಕಪ್ ಪಂದ್ಯಾವಳಿಯ ಶೇ.40 ಜಾಹೀರಾತುಗಳಲ್ಲಿ ತಂಬಾಕಿನ ಪರೋಕ್ಷ ಪ್ರಚಾರ

ನವದೆಹಲಿ, ಮೇ 31 – ಕಳೆದ 2023ರ ಕ್ರಿಕೆಟ್ ವಿಶ್ವಕಪ್ ಪಂದ್ಯಾವಳಿಯ ಕೊನೆಯ 17 ಪಂದ್ಯಗಳಲ್ಲಿ ಪ್ರಸಾರ ಮಾಡಲಾದ ಜಾಹೀರಾತುಗಳಲ್ಲಿ ಅರ್ಧದಷ್ಟು ಹೊಗೆ ರಹಿತ ತಂಬಾಕು ಉತ್ಪನ್ನಗಳ ಪರೋಕ್ಷ ಪ್ರಚಾರದವಾಗಿದ್ದವು ಎಂದು ಅಧ್ಯಯನವೊಂದು ತಿಳಿಸಿದೆ.

ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ (ಐ.ಸಿ.ಎಂ.ಆರ್.) ಹಾಗೂ ವೈಟಲ್ ಸ್ಟ್ರಾಟಜೀಸ್ ನಡೆಸಿದ ಅಧ್ಯಯನದ ಪ್ರಕಾರ, ಶೇ.41.3ರಷ್ಟು ಜಾಹೀರಾತುಗಳು ಹೊಗೆರಹಿತ ತಂಬಾಕು ಬ್ರಾಂಡ್‌ಗಳ ಪರೋಕ್ಷ ಪ್ರಚಾರದವಾಗಿದ್ದವು. ಇವುಗಳಲ್ಲಿ ವಿಲಕ್ಕಿಯ ಪ್ರಚಾರ ಪ್ರಮುಖವಾಗಿತ್ತು.

ವಿಮಲ್ ಹಾಗೂ ಕಮ್ಲಾ ಪಸಂದ್ ಬ್ರಾಂಡ್‌ಗಳು ಪರೋಕ್ಷ ಪ್ರಚಾರ ನಡೆಸಿದ್ದವು. ವಿಮಲ್ ಬ್ರಾಂಡ್ ಪ್ರಚಾರದಲ್ಲಿ ಬಾಲಿವುಡ್ ತಾರೆಯರು ಪ್ರಮುಖವಾಗಿದ್ದರು. ಕಮ್ಲಾ ಪಸಂದ್ ಬ್ರಾಂಡ್ ಅನ್ನು ಮಾಜಿ ಕ್ರಿಕೆಟಿಗರು ಪ್ರಮುಖವಾಗಿ ಪ್ರಚಾರ ಮಾಡಿದ್ದರು ಎಂದು ಅಧ್ಯಯನ ತಿಳಿಸಿದೆ. ಬ್ರಿಟಿಷ್ ಮೆಡಿಕಲ್ ಜರ್ನಲ್ ನಿಯತಕಾಲಿಕದಲ್ಲಿ ಅಧ್ಯಯನ ಪ್ರಕಟಿಸಲಾಗಿದೆ.

ವಿಶ್ವದ 70 ದೇಶಗಳಲ್ಲಿ 35 ಕೋಟಿ ಜನರು ಹೊಗೆ ರಹಿತ ತಂಬಾಕು ಸೇವಿಸುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಘಟನೆ ತಿಳಿಸಿದೆ ಈ ರೀತಿಯ ಉತ್ಪನ್ನಗಳಲ್ಲಿ ಭಾರತ ಮುಂಚೂಣಿಯಲ್ಲಿದೆ. ದೇಶದ 20 ಕೋಟಿ ವಯಸ್ಕರು ಈ ರೀತಿಯ ಉತ್ಪನ್ನ ಬಳಸುತ್ತಾರೆ.

ತುಂಬಾಕು ಉದ್ಯಮ ಪ್ರತಿ ವರ್ಷ ಹೊಗೆ ರಹಿತ ತಂಬಾಕು ಉತ್ಪನ್ನಗಳ ಪ್ರಚಾರಕ್ಕಾಗಿ 50 ಕೋಟಿ ಡಾಲರ್‌ಗಳನ್ನು ಖರ್ಚು ಮಾಡುತ್ತದೆ.

ಕೋಟ್ಪಾ ಕಾಯ್ದೆಯ ಪ್ರಕಾರ ತಂಬಾಕು ಉತ್ಪನ್ನಗಳ ಜಾಹೀರಾತು, ಉತ್ತೇಜನ ಹಾಗೂ ಪ್ರಾಯೋಜಕತ್ವ ನಿಷೇಧಿಸಲಾಗಿದೆ. ಈ ನಿರ್ಬಂಧದಿಂದ ನುಣುಚಿಕೊಳ್ಳಲು ಕ್ರೀಡೆಗಳಲ್ಲಿ ಪರೋಕ್ಷವಾಗಿ ತಂಬಾಕು ಉತ್ಪನ್ನಗಳ ಪ್ರಚಾರ ಮಾಡಲಾಗುತ್ತಿದೆ.

ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಾವಳಿಗಳ ಮೂಲಕ ಪರೋಕ್ಷವಾಗಿ ಹೊಗೆರಹಿತ ತಂಬಾಕು ಉತ್ಪನ್ನಗಳ ಪ್ರಚಾರ ಮಾಡಲಾಗುತ್ತಿದೆ. ಇದರ ಮೇಲೆ ಸಂಪೂರ್ಣ ನಿಷೇಧ ಹೇರಬೇಕಿದೆ ಎಂದು ಅಧ್ಯಯನ ತಿಳಿಸಿದೆ.

**ಭದ್ರಾ ಜಲಾಶಯ**



ನೀರಿನ ಮಟ್ಟ : 117 ಅಡಿ 2 ಇಂಚು
ಒಳ ಹರಿವು : 483 ಕ್ಯೂಸೆಕ್ಸ್
ಹೊರ ಹರಿವು : 379 ಕ್ಯೂಸೆಕ್ಸ್
ಕಳೆದ ವರ್ಷ : 137 ಅಡಿ 7 ಇಂಚು

## ಕೇರಳದಲ್ಲಿ ಬಲಿ ನಡೆದಿಲ್ಲ

ತಿರುವನಂತಪುರಂ, ಮೇ 31 – ಉತ್ತರ ಕೇರಳದ ದೇವಾಲಯದ ಬಳಿ ತಮ್ಮ ವಿರುದ್ಧ ಪ್ರಾಣಿ ಬಲಿ ಮಾಡಲಾಗಿತ್ತು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿದ್ದ ಹೇಳಿಕೆಯನ್ನು ಕೇರಳ ಉನ್ನತ ಶಿಕ್ಷಣ ಹಾಗೂ ಸಾಮಾಜಿಕ ನ್ಯಾಯ ಸಚಿವೆ ಆರ್. ಬಿಂದು ತಳ್ಳಿಹಾಕಿದ್ದಾರೆ.

ಕೇರಳದಲ್ಲಿ ಇಂತಹ ಘಟನೆಗಳು ನಡೆಯುವುದಿಲ್ಲ. ದೇಶದ ಇತರೆ ಭಾಗಗಳಲ್ಲಿ ಸಮಾಜವನ್ನು ಕತ್ತಲೆ ಯುಗಕ್ಕೆ ಎಳೆಯುವ ಪ್ರಯತ್ನ ನಡೆಯುತ್ತಿದೆ ಎಂದಿದ್ದಾರೆ.

ಈ ರೀತಿಯ ಪ್ರಯತ್ನಗಳು ನಮ್ಮ ರಾಜ್ಯದಲ್ಲಿಯೂ ನಡೆಯುತ್ತಿವೆಯೇ ಎಂಬ ಬಗ್ಗೆ ಪರಿಶೀಲಿಸಬೇಕಿದೆ ಎಂದೂ ಅವರು ಹೇಳಿದ್ದಾರೆ.

ಶತ್ರು ಭೈರವಿ ಯಾಗದ ಹೆಸರಿನಲ್ಲಿ ಕೇರಳದ ದೇವಾಲಯದಲ್ಲಿ ಪ್ರಾಣಿ ಬಲಿ ಕೊಡಲಾಗಿದೆ. ತಮ್ಮನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಗುರಿಯಾಗಿಟ್ಟುಕೊಂಡು ಈ ಯಾಗ ನಡೆಸಲಾಗಿದೆ ಎಂದು ಶಿವಕುಮಾರ್ ಆರೋಪಿಸಿದ್ದರು. ಶತ್ರು ಸಂಹಾರಕ್ಕಾಗಿ ಕೇರಳದ ರಾಜರಾಜೇಶ್ವರಿ ದೇವಾಲಯದ ಬಳಿ ಶತ್ರು ಭೈರವಿ ಯಾಗ ನಡೆಸಲಾಗಿದೆ. ಈ ಯಾಗದಲ್ಲಿ ಪಂಚ ಬಲಿ ನೀಡಲಾಗಿದೆ. 21 ಮೇಕೆ, 3 ಎಮ್ಮೆ, 21 ಕುರಿಗಳು ಸೇರಿದಂತೆ ಪಂಚ ಬಲಿ ಕೊಡುತ್ತಿದ್ದಾರೆ ಎಂದು ಶಿವಕುಮಾರ್ ಹೇಳಿದ್ದರು.

ssims SPARSH ORTHOPAEDICS • PLASTIC • NEURO SCIENCES CENTRE FOR ACCIDENTS BONE & JOINT CARE
ಸ್ಪರ್ಶ್ ಆಸ್ಪತ್ರೆ – ಬೆಂಗಳೂರು, ಇಲ್ಲಿನ ಪ್ರಮುಖ ವೈದ್ಯ ಮತ್ತು ಮಧುಮೇಹ ತಜ್ಞರು
ದಾವಣಗೆರೆ ಸ್ಪರ್ಶ್ ಸೂಪರ್ ಸ್ಪೆಷಾಲಿಟಿ ಕ್ಲಿನಿಕಿನಲ್ಲಿ ಲಭ್ಯರಿರುತ್ತಾರೆ
ಪ್ರತೀ ಹದಿನೈದು ದಿನಗಳಿಗೊಮ್ಮೆ
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ
ಡಾ|| ಸಮಿತ್ ಎ ಶೆಟ್ಟಿ
MBBS, MDRC, PGDD (UK) (Cambridge University)
Consultant Diabetologist
ಇದಕ್ಕಾಗಿ ಸಮಾಲೋಚಿಸಿ:
• ಗರ್ಭಾವಸ್ಥೆಯ ಮಧುಮೇಹ
• ಥೈರೊಯ್ಡ್ ಸಮಸ್ಯೆಗಳು
• ಮಧುಮೇಹದಲ್ಲಿ ಮೂತ್ರಪಿಂಡದ ಕಾಯಿಲೆ
• ಹೃದ್ರೋಗಿಗಳಲ್ಲಿ ಮಧುಮೇಹ
• ನರಮಂಡದ ತೊಂದರೆಗಳು
• ಮಧುಮೇಹಕ್ಕೆ ಸಂಬಂಧಿಸಿದ ನರಗಳ ತೊಂದರೆಗಳು
• ಮಧುಮೇಹಕ್ಕೆ ಸಂಬಂಧಿಸಿದ ಕಣ್ಣಿನ ತೊಂದರೆಗಳು
ದಿನಾಂಕ: ಮಂಗಳವಾರ, 4ನೇ ಜೂನ್ 2024 । ಸಮಯ: ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ
ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002
ನೋಂದಣಿಗಾಗಿ ಕರೆಮಾಡಿ: 96869 29090 / 99800 33277
ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ (TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ










# ಮಲೇಬೆನ್ನೂರು : ವಿವಿಧೆಡೆ ಸಂಭ್ರಮದ ಶಾಲಾ ಪ್ರಾರಂಭೋತ್ಸವ



ಮಲೇಬೆನ್ನೂರು, ಮೇ 31- ಶುಕ್ರವಾರ ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮಗಳು ಸಂಭ್ರಮದಿಂದ ನಡೆದವು.

ಶಾಲೆಗಳನ್ನು ಹಸಿರು ತೋರಣಗಳಿಂದ ಸಿಂಗಾರ ಮಾಡಲಾಗಿತ್ತು. ಶಾಲೆಗೆ ಬಂದ ಮಕ್ಕಳಿಗೆ ಹೂವು ಮತ್ತು ಚಾಕೋಲೇಟ್ ನೀಡಿ ಸ್ವಾಗತಿಸಿದ್ದು ವಿಶೇಷವಾಗಿತ್ತು.

ಎಲ್ಲಾ ಶಾಲೆಗಳಲ್ಲಿ ಮಧ್ಯಾಹ್ನ ಮಕ್ಕಳಿಗೆ ಸಿಹಿ ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು. ಇದೇ ದಿನ ಮಕ್ಕಳಿಗೆ ಸರ್ಕಾರ ನೀಡುವ ಉಚಿತ ಪಠ್ಯಪುಸ್ತಕ ಮತ್ತು ಸಮವಸ್ತ್ರಗಳನ್ನೂ ಸಹ ವಿತರಿಸಲಾಯಿತು. ಶಾಲೆ ಆರಂಭದ ಮೊದಲ ದಿನವಾಗಿದ್ದರಿಂದ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಸಹಜವಾಗಿಯೇ ಕಡಿಮೆ ಇತ್ತು.

ಜಿಗಳಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಪ್ರಾರಂಭೋತ್ಸವವು ಸಂಭ್ರಮದಿಂದ ಕೂಡಿತ್ತು.

ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರಾಚಾರಿ, ಪತ್ರಕರ್ತ ಪ್ರಕಾಶ್, ಶಾಲಾ ಮುಖ್ಯ ಶಿಕ್ಷಕ ನಾಗೇಶ್, ಶಿಕ್ಷಕರಾದ ಮಲ್ಲಿಕಾರ್ಜುನ್, ಲಿಂಗರಾಜ್, ಗುಡ್ಡಪ್ಪ, ಶ್ರೀನಿವಾಸ್ ರೆಡ್ಡಿ, ಜಯಶ್ರೀ, ಕರಿಬಸಮ್ಮ ಮತ್ತಿತರರು ಮಕ್ಕಳಿಗೆ ಹೂವು ಮತ್ತು ಚಾಕೋಲೇಟ್ ನೀಡಿ, ಶಾಲೆಗೆ ಬರಮಾಡಿಕೊಂಡರು. ನಂತರ ಪಠ್ಯಪುಸ್ತಕ, ಸಮವಸ್ತ್ರ ವಿತರಿಸಿ, ಮಧ್ಯಾಹ್ನ ಸಿಹಿಯೂಟ ನೀಡಲಾಯಿತು.

ಮಲೇಬೆನ್ನೂರಿನ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಪ್ರಾರಂಭೋತ್ಸವದಲ್ಲಿ ಮಕ್ಕಳಿಗೆ ಪಠ್ಯಪುಸ್ತಕ ವಿತರಿಸಿ, ಸಿಹಿಯೂಟ ನೀಡಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ಕಾರ್ಯ ದರ್ಶಿ ಹೆಚ್.ಜಿ.ಚಂದ್ರಶೇಖರ್, ನಿರ್ದೇಶಕ ಎಂ.ಆರ್.ಮಾರಪ್ಪ, ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪಿ.ಹೆಚ್.ಶಿವಕುಮಾರ್, ಕಾರ್ಯದರ್ಶಿ ಎಂ.ಕೆ.ಗಜೇಂದ್ರ ಸ್ವಾಮಿ, ಬಟ್ಟೆ ಅಂಗಡಿ ವಿಶ್ವ, ಎಸ್‌ಡಿಎಂಸಿ ಅಧ್ಯಕ್ಷ ಪಿ.ಆರ್.ಸನಾವುಲ್ಲಾ, ಪತ್ರಕರ್ತ ಜಿಗಳಿ ಪ್ರಕಾಶ್, ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಶಿಕ್ಷಕರಾದ ಯಂಕನಾಯ್ಕ, ಪ್ರೇಮ ಲೀಲಾ ಬಾಯಿ, ಜಿ.ಕೆ.ಬಸವರಾಜಪ್ಪ, ಹನುಮಂತಪ್ಪ, ಎಂ.ಕೆ.ಸುನೀಲ್ ಭಾಗವಹಿಸಿದ್ದರು.

### ಪಿಡಬ್ಲ್ಯೂಡಿ ಶಾಲೆಗೆ ಡಿಡಿಪಿಐ ಭೇಟಿ

**ಡಿಡಿಪಿಐ ಭೇಟಿ :** ಪಟ್ಟಣದ ಪಿಡಬ್ಲ್ಯೂಡಿ ಕಾಲೋನಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಾಲಾ ಪ್ರಾರಂಭೋತ್ಸವದಲ್ಲಿ ಡಿಡಿಪಿಐ ಕೊಟ್ರೇಶ್ ಅವರು ಪಾಲ್ಗೊಂಡು ಮಕ್ಕಳಿಗೆ ಉಚಿತ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಬೆಣ್ಣೆಹಳ್ಳಿ ಬಸವರಾಜ್ ಹಾಗೂ ಶಿಕ್ಷಕರು, ಎಸ್‌ಡಿಎಂಸಿ ಸದಸ್ಯರು, ಪೋಷಕರು ಭಾಗವಹಿಸಿದ್ದರು.

# ನಿಗಮ ಪ್ರಕರಣ : ಸಿಬಿಐ ತನಿಖೆಯಿಂದ ಸರ್ಕಾರಕ್ಕೆ ಇಕ್ಕಟ್ಟು

ಬೆಂಗಳೂರು, ಮೇ 31 - ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಬುಡಕಟ್ಟು ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣದ ತನಿಖೆಯನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಿಬಿಐಗೆ ವಹಿಸಿದೆ.

ಬ್ಯಾಂಕ್ ನಿರ್ಧಾರ ಕರ್ನಾಟಕ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದ್ದು ಇಲಾಖೆ ಹೊಣೆ ಹೊತ್ತಿರುವ ಸಚಿವ ನಾಗೇಂದ್ರ ತಲೆದಂಡವಾಗುವ ಸಾಧ್ಯತೆ ಇದೆ.

ಪ್ರಕರಣವನ್ನು ಸಿಬಿಐಗೆ ವಹಿಸುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ, ಹಿರಿಯ ಸಚಿವ ಎಂ.ಬಿ. ಪಾಟೀಲ್ ಅಲ್ಲದೆ, ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದ ಸಚಿವರಾದ ಡಾ.ಜಿ. ಪರಮೇಶ್ವರ್ ಡಾ.ಎಚ್.ಸಿ.ಮಹದೇವಪ್ಪ, ಕೆ.ಎನ್.ರಾಜಣ್ಣ, ಪ್ರಿಯಾಂಕ್ ಖರ್ಗೆ ಜೊತೆ ಸಮಾಲೋಚನೆ ನಡೆಸಿದರು.

ಬ್ಯಾಂಕ್‌ನವರು ಪ್ರಕರಣವನ್ನು ಸಿಬಿಐಗೆ ನೀಡಿರುವುದರಿಂದ ರಾಜ್ಯ ಸರ್ಕಾರದ ಪಾತ್ರದ ಬಗ್ಗೆ ಕಾನೂನು ತಜ್ಞರ ಸಲಹೆ ಪಡೆಯಲು ಸಭೆ ನಿರ್ಧರಿಸಿದೆ.

ರಾಜ್ಯ ಸರ್ಕಾರವೇ ಪ್ರಕರಣವನ್ನು ಸಿಐಡಿಗೆ ವಹಿಸಿ, ತನಿಖೆ ನಡೆಸುತ್ತಿರುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ನಡೆಸಿದೆ ಎಂಬ ಮಾತು ಸಭೆಯಲ್ಲಿ ಕೇಳಿಬಂತು.

ಪ್ರಕರಣ ಬಹಿರಂಗಗೊಳ್ಳುತ್ತಿದ್ದಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತ್ತು ಮಾಡಿದ್ದೇವೆ. ಅಲ್ಲದೆ, ಇಲಾಖೆ ಹಣ ತೆಲಂಗಾಣದ ಬ್ಯಾಂಕ್‌ಗಳಿಗೆ ವರ್ಗಾವಣೆ ಆಗಿ, ಆ ಹಣವನ್ನು ಬಳಕೆ ಮಾಡಲಾಗಿದೆಯೇ ಎಂಬ ಮಾಹಿತಿಯನ್ನು ಅಲ್ಲಿನ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಕೋರಿರುವುದಾಗಿಯೂ ಮುಖ್ಯಮಂತ್ರಿ ಸಭೆಗೆ ತಿಳಿಸಿದರು.

ಪರಿಶಿಷ್ಟ ಸಮುದಾಯಕ್ಕೆ ಸೇರಿದ ಸಚಿವರೊಬ್ಬರನ್ನು ಗುರಿಯಾಗಿಟ್ಟು ಕೊಂಡು ರಾಜ್ಯ ಬಿಜೆಪಿ ರಾಜಕೀಯ ಮಾಡಲು ಹೊರಟಿದೆ. ಪ್ರಕರಣವನ್ನು ಸಿಬಿಐಗೆ ವಹಿಸಲು ಇವರ ಪಾತ್ರವೂ ಇರಬಹುದೆಂದು ಕಿಡಿಕಾರಿದ್ದಾರೆ.

ಇಲಾಖಾ ಮುಖ್ಯಸ್ಥರು ಮತ್ತು ಕಾನೂನು ತಜ್ಞರಿಂದ ವರದಿ ಪಡೆದ ನಂತರ ನಾಗೇಂದ್ರ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸಭೆ ನಿರ್ಧರಿಸಿದೆ. ಆದರೆ, ಇದನ್ನು ನಾವೂ ರಾಜಕೀಯವಾಗೇ ಎದುರಿಸಬೇಕು ಎಂಬ ಮಾತು ಸಭೆಯಲ್ಲಿ ಕೇಳಿಬಂದಿದೆ.

ಜೂನ್ 6 ರೊಳಗೆ ಸಚಿವ ನಾಗೇಂದ್ರ ಅವರನ್ನು ಸಂಪುಟದಿಂದ ಕೈಬಿಡದಿದ್ದರೆ ರಾಜ್ಯಾದ್ಯಂತ ಬಿಜೆಪಿ ಉಗ್ರ ಹೋರಾಟ ಮಾಡುವುದಾಗಿ ನಿನ್ನೆಯಷ್ಟೇ ಎಚ್ಚರಿಕೆ ನೀಡಿತ್ತು. ಕಾಕತಾಳೀಯ ಎಂಬಂತೆ ಯೂನಿಯನ್ ಬ್ಯಾಂಕ್‌ನ ಆಡಳಿತ ಮಂಡಳಿ ಕೂಡಾ ಸಿಬಿಐಗೆ ಪತ್ರ ಬರೆದು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಬುಡಕಟ್ಟು ಅಭಿವೃದ್ಧಿ ನಿಗಮದ ಹಣವನ್ನು ಬೆಂಗಳೂರಿನ ಎಂ.ಜಿ.ರಸ್ತೆ ಶಾಖೆಯಿಂದ ಬೇರೆಡೆಗೆ ವರ್ಗಾಯಿಸಿ ಅಕ್ರಮ ಎಸಗಿದೆ. ಈ ಬಗ್ಗೆ ತನಿಖೆ ನಡೆಸುವಂತೆ ಬ್ಯಾಂಕ್ ಸಿಬಿಐಗೆ ಕೋರಿದೆ.

ಅಕ್ರಮಕ್ಕೆ ಸಂಬಂಧಿಸಿದಂತೆ ಶಾಖೆಯ ಮೂವರು ಅಧಿಕಾರಿಗಳನ್ನು ಅಮಾನತ್ತು ಮಾಡಿದ್ದೇವೆ ಎಂದು ತನ್ನ ಹೇಳಿಕೆಯಲ್ಲಿ ತಿಳಿಸಿದೆ.

## ನಿಗಮದ ಪ್ರಕರಣ ಸಿಬಿಐಗೆ ಇಲ್ಲ

**(1ನೇ ಪುಟದಿಂದ)** ಅಕ್ರಮ ನಡೆದಿದೆಯೇ ಎಂಬುದು ಸಿಐಡಿ ತನಿಖೆಯಿಂದ ಗೊತ್ತಾಗಲಿದೆ ಎಂದರು.

ನೂರು ಕೋಟಿ ರೂ. ಮೀರಿದ ಮೊತ್ತದ ಅಕ್ರಮವಾದರೆ ಮುಂದೆ ಏನು ಮಾಡಬಹುದು ಎಂಬುದನ್ನು ನೋಡೋಣ. ಆದರೆ, ನಾವಾಗಿಯೇ ಸಿಬಿಐಗೆ ವರ್ಗಾವಣೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಸಿಬಿಐಗೆ ವರ್ಗಾವಣೆ ಮಾಡುವುದಿಲ್ಲ, ಅಂತಹ ಸಂದರ್ಭ ಬಂದಾಗ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಲೇ ಬೇಕಾಗುತ್ತದೆ. ಪ್ರತಿಭಟನೆ ಮಾಡುವುದು, ಗಡುವು ನೀಡುವುದು ವಿರೋಧ ಪಕ್ಷದವರ ಹಕ್ಕು, ಮಾಡಲಿ. ಸರ್ಕಾರದಲ್ಲಿ ನಮಗೂ ಜವಾಬ್ದಾರಿಗಳಿವೆ, ಆ ದಿಸೆಯಲ್ಲಿ ಕೆಲಸ ಮಾಡುತ್ತೇವೆ ಎಂದರು.

ಪ್ರಜ್ವಲ್ ರೇವಣ್ಣ ಬಂಧನಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು, ಪ್ರಕರಣದ ಕುರಿತು ಅಧಿಕಾರಿಗಳ ಜೊತೆ ಚರ್ಚೆ ಮಾಡಿಲ್ಲ. ವಾಲ್ಮೀಕಿ ನಿಗಮದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಆತ್ಮಹತ್ಯೆ ಮಾಡಿಕೊಂಡ ಚಂದ್ರಶೇಖರ್ ಕುಟುಂಬಕ್ಕೆ ಸಾಂತ್ವನ ಹೇಳಲು ನಿನ್ನೆ ಶಿವಮೊಗ್ಗಕ್ಕೆ ಹೋಗಿದ್ದೆ. ತಡವಾಗಿ ಬಂದ ಕಾರಣ ಚರ್ಚಿಸಲು ಸಾಧ್ಯವಾಗಿಲ್ಲ ಎಂದರು.

ಪ್ರಜ್ವಲ್ ಬಂಧನವಾಗಲು ತಡವಾಗಿದ್ದರಿಂದ ಸಾಕಷ್ಟು ಸಂತ್ರಸ್ತೆಯರು ದೂರು ಕೊಡಲು ಮುಂದೆ ಬಂದಿರಲಿಲ್ಲ. ಯಾರಿಗೆ ತೊಂದರೆ ಆಗಿದೆಯೋ ಅವರು ಪೊಲೀಸರ ಮುಂದೆ ಬಂದು ದೂರು ಕೊಡಬಹುದು, ಎಸ್‌ಐಟಿ ಮುಂದೆ ಹೇಳಬಹುದು ಎಂದು ಮೊದಲೇ ತಿಳಿಸಲಾಗಿದೆ ಎಂದು ಹೇಳಿದರು.

ದೂರು ಕೊಡುವವರಿಗೆ ಸೂಕ್ತ ರಕ್ಷಣೆ ನೀಡಲಾಗುತ್ತದೆ. ಸಂತ್ರಸ್ತೆಯರಿಗಾಗಿ ತೆರೆಯಲಾದ ಸಹಾಯವಾಣಿ ವಿಚಾರ ಕುರಿತು ಹೆಚ್ಚು ತಿಳಿದುಕೊಂಡಿಲ್ಲ, ಕೆಲವು ವಿಚಾರವನ್ನು ಎಸ್‌ಐಟಿ ಗೌಪ್ಯವಾಗಿ ಇಟ್ಟುಕೊಳ್ಳುತ್ತದೆ ಎಂದರು.

## ಭಾರತಕ್ಕೆ 100 ಮೆಟ್ರಿಕ್ ಟನ್ ಬಂಗಾರ ವಾಪಸ್

**(1ನೇ ಪುಟದಿಂದ)** ಇರಿಸಲಾಗಿದೆ.

100 ಮೆಟ್ರಿಕ್ ಟನ್ ಬಂಗಾರ ವಾಪಸ್ ತಂದಿರುವ ಕಾರಣ, ದೇಶದಲ್ಲಿ ದಾಸ್ತಾನು ಮಾಡಿರುವ ಬಂಗಾರದ ಪ್ರಮಾಣ 408 ಮೆಟ್ರಿಕ್ ಟನ್‌ಗಳಿಗೆ ತಲುಪಿದೆ.

ಭಾರತ ಹಾಗೂ ವಿದೇಶಗಳಲ್ಲಿ ಈಗ ಬಹುತೇಕ ಸಮ ಪ್ರಮಾಣದ ಬಂಗಾರ ಸಂಗ್ರಹವಾದಂತಾಗಿದೆ. ವಿದೇಶದಲ್ಲಿ ಈಗ 413.79 ಮೆಟ್ರಿಕ್ ಟನ್ ಬಂಗಾರ ಇದೆ.

## ತನಿಖೆಗೆ ಎಸ್.ಐ.ಟಿ. ರಚನೆ ಆದೇಶ

**(1ನೇ ಪುಟದಿಂದ)** ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಬೆಂಗಳೂರು ನಗರದ ಸಂಚಾರ ದಕ್ಷಿಣ ವಿಭಾಗದ ಉಪ ಪೊಲೀಸ್ ಆಯುಕ್ತ ಶಿವಪ್ರಕಾಶ್ ದೇವರಾಜು, ರಾಜ್ಯ ಗುಪ್ತವಾರ್ತೆಯ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್ ಹಾಗೂ ಸಿಐಡಿಯ ಪೊಲೀಸ್ ಅಧೀಕ್ಷಕ ರಾಘವೇಂದ್ರ ಕೆ ಹೆಗಡೆ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

## ಸಂತೆಬೆನ್ನೂರಲ್ಲಿ ಗುತ್ತಿಗೆದಾರ ಆತ್ಮಹತ್ಯೆ

ದಾವಣಗೆರೆ, ಮೇ 31- ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರಿನ ಗುತ್ತಿಗೆದಾರ ಪಿ.ಎಸ್. ಗೌಡರ್ (50) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಳೆದ ಮೇ 26 ರಂದು ಮನೆಯಲ್ಲಿನ ಫ್ಯಾನ್‌ಗೆ ನೇಣು ಹಾಕಿಕೊಂಡು ಮೃತಪಟ್ಟಿದ್ದು ಡೆತ್‌ನೋಟ್ ಬರೆದಿಟ್ಟಿದ್ದಾರೆ. ಅದರಲ್ಲಿ ಅವರು ಕೌಟುಂಬಿಕ ವ್ಯಾಜ್ಯ, ಕೆಆರ್‌ಐಡಿಎಲ್ ಕಾಮಗಾರಿ ನಡೆಸಿದ ಹಣ ಬಂದಿಲ್ಲ ಎಂಬುದು ಸೇರಿ ಇನ್ನಿತರೆ ಕಾರಣಗಳನ್ನೂ ಪ್ರಸ್ತಾಪಿಸಿದ್ದಾರೆ. ಇದನ್ನು ಆಧರಿಸಿ ಗೌಡರ್ ಪತ್ನಿ ವಸಂತಕುಮಾರಿ ಸಂತೇಬೆನ್ನೂರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಕೆಆರ್‌ಐಡಿಎಲ್ (ಲ್ಯಾಂಡ್ ಆರ್ಮಿ) ಸಂಸ್ಥೆ ಸೇರಿ 5 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ನಾನು ಮತ್ತು ನನ್ನ ಮಗಳು ಚಿತ್ರದುರ್ಗಕ್ಕೆ ಸಂಬಂಧಿಕರ ಮನೆಯಲ್ಲಿ ಸೀಮಂತ ಕಾರ್ಯಕ್ರಮಕ್ಕೆ ಹೋಗಿದ್ದಾಗ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ವಸಂತಕುಮಾರಿ ದೂರಿನಲ್ಲಿ ತಿಳಿಸಿದ್ದಾರೆ.


## ಮಾರಣಾಂತಿಕ ಹಲ್ಲೆ : ಇಬ್ಬರ ಬಂಧನ

**(1ನೇ ಪುಟದಿಂದ)** ಮುಂದಾಗಿದ್ದು, ನಂಬರ್ ಇರದ ಎರ್ಟಿಗಾ ಕಾರ್‌ನಲ್ಲಿ ಶರಣ್ ಅವರನ್ನು ನಾಗರಾಜ್, ನಾಸೀರ್, ಮಂಜು, ರಾಮು ಎಂಬುವವರು ಕಿಡ್ನಾಪ್ ಮಾಡಿದ್ದು, ಇದೇ ಗಾಡಿ ಹಿಂದೆ ಶಿಫ್ಟ್ ಕಾರ್‌ನಲ್ಲಿ ವಿಶ್ವನಾಥ್ ಮತ್ತು ಚಂದನ್ ಫಾಲೋ ಮಾಡಿಕೊಂಡು ಬಂದಿದ್ದಾರೆ ಎನ್ನಲಾಗಿದೆ.

ದಾವಣಗೆರೆ ಕಂಟ್ರೋಲ್ ರೂಂನ ಮಾಹಿತಿ ಆಧರಿಸಿ ಕಾರ್ಯಪ್ರವೃತ್ತರಾದ ಹೊನ್ನಾಳಿ ಪೊಲೀಸರು, ಠಾಣೆ ಮುಂದೆ ಆರೋಪಿಗಳ ಗಾಡಿ ಪಾಸ್ ಆಗಬೇಕಿದ್ದು, ಅವರಿಗೆ ಪೊಲೀಸರು ಫಾಲೋ ಮಾಡುವ ಅನುಮಾನ ಬಂದು ಪಟ್ಟಣದ ಒಡ್ಡಿನ್ ಕೆರೆ ಹಳ್ಳದ ಬಳಿ ಚಾಕು ಮೂಲಕ ಬೆನ್ನಿಗೆ ಇರಿದಿದ್ದಾರೆ. ನಾಗರಾಜ್, ನಾಸೀರ್ ಎಂಬುವರನ್ನು ಬಂಧಿಸಲಾಗಿದೆ.

ಮಂಜು, ರಾಮು, ವಿಶ್ವನಾಥ್, ಚಂದನ್ ತಪ್ಪಿಸಿಕೊಂಡಿದ್ದಾರೆ. ಹೊನ್ನಾಳಿ ಠಾಣೆಗೆ ಕೆಟಿಜಿ ನಗರದ ಪೊಲೀಸ್ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ಭೇಟಿ ನೀಡಿ, ಹೊನ್ನಾಳಿ ಪೊಲೀಸ್ ಇನ್‌ಸ್ಪೆಕ್ಟರ್ ಮುದ್ದುರಾಜ್ ಅವರಿಂದ ಮಾಹಿತಿ ಪಡೆದು, ನಂತರ ಆಸ್ಪತ್ರೆಗೆ ತೆರಳಿದ ಘಟನೆ ನಡೆದಿದೆ. ಹೆಚ್ಚಿನ ವಿಚಾರಣೆಯಿಂದ ಘಟನೆಯ ಮಾಹಿತಿ ತಿಳಿದು ಬರಬೇಕಿದೆ.


**ಜನ್ಮ ದಿನದ ಶುಭಾಶಯಗಳು**




ಇಂದು ತಮ್ಮ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ದಾವಣಗೆರೆ ಛಾಯಾಗ್ರಾಹಕರ ಸಹಕಾರ ಸಂಘದ ಅಧ್ಯಕ್ಷರು, ಫೋಟೋಗ್ರಾಫರ್ ಯೂತ್‌ವೆಲ್‌ಫೇರ್ ಅಸೋಸಿಯೇಷನ್ ದಾವಣಗೆರೆ ಇದರ ಉಪಾಧ್ಯಕ್ಷರೂ, ದಾವಣಗೆರೆ ಜಿಲ್ಲಾ ಬಾಸ್ಕೆಟ್ ಬಾಲ್ ಕ್ಲಬ್ ನಿರ್ದೇಶಕರೂ, ಆತ್ಮೀಯರೂ ಆದ

**ಶ್ರೀಯುತ ಎಸ್.ಆರ್. ತಿಪ್ಪೇಸ್ವಾಮಿ**
(ಆರೆಂಜ್ ಸ್ಟುಡಿಯೋ ಮಾಲೀಕರು)
ಇವರಿಗೆ ಜನ್ಮ ದಿನದ ಶುಭಾಶಯಗಳು.

ಶುಭ ಕೋರುವವರು
**ಗೆಳೆಯರ ಬಳಗ, ದಾವಣಗೆರೆ**

**ಸೈಟುಗಳು ಮಾರಾಟಕ್ಕಿವೆ**
ಬನಶ್ರೀ ಲೇಔಟ್ ಹತ್ತಿರ ಸಿರಿಮನೆ ಡಾಬಾ ಹತ್ತಿರ 100 ಅಡಿ ರೋಡಿಗೆ ಹತ್ತಿರ 30x40 North. Rate - 4000/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟ್ ಮಾರಾಟಕ್ಕೆ**
MCC 'B' Block ನಲ್ಲಿ 44x60
ಸಿದ್ದವೀರಪ್ಪ - ಸೈಟ್, ಮನೆ 30x40
ಆಂಜನೇಯ - ಸೈಟ್, ಮನೆ 30x40
ವಿವೇಕಾನಂದ - ಸೈಟು, ಮನೆ 30x50
ಡಾಲರ್ಸ್ ಕಾಲೋನಿ - 30x40, 30x50 - ಸೈಟ್, ಮನೆ
ಎಸ್.ಎಸ್. ಲೇಔಟ್ - 30x50, 30x40 - ಮನೆ
Veeresh - 76765 58585

**ಮನೆ ಬಾಡಿಗೆಗೆ ಇದೆ**
ಬಾಲಕರ ವೈದ್ಯಕೀಯ ಹಾಸ್ಟೆಲ್ ರಸ್ತೆ, 10ನೇ ಮೇನ್‌ನಲ್ಲಿ ಸಂಪೂರ್ಣ ಸುಸಜ್ಜಿತ (fully furnished) ಮೂರು ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
99861 21251

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಸೈಟ್ ಮಾರಾಟಕ್ಕಿದೆ**
40x60 ಅಳತೆಯ ಸೈಟ್ ನಂ. 2291-HIG-1, ಕರ್ನಾಟಕ ಗೃಹ ಮಂಡಳಿ, ತುಂಗಭದ್ರಾ ಬಡಾವಣೆ, ದಾವಣಗೆರೆಯಲ್ಲಿ ಸೈಟ್ ಮಾರಾಟಕ್ಕಿದೆ.
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
94814 17793

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್
Above 40 years
ಅನುಭವವುಳ್ಳವರು ಡ್ರೈವರ್, ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ.
63620 23451
97434 37003

**ಮನೆ ಬಾಡಿಗೆಗೆ ಇದೆ**
ಚಾಮರಾಜಪೇಟೆ, ಲೋಕಮಾನ್ಯ ರಸ್ತೆಯಲ್ಲಿ 1ನೇ ಮಹಡಿಯಲ್ಲಿ 2 ಬೆಡ್ ರೂಂ ಹಾಗೂ ಸ್ವಂತ ಬೋರ್ ಇರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
78920 18341

**ಸೈಟ್ ಮಾರಾಟಕ್ಕಿದೆ**
ಕೊಂಡಜ್ಜಿ ರೋಡ್‌ನಲ್ಲಿ ಶಿಬಾರದಬಳಿ 40x60 ಅಳತೆಯ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸ ಬೇಕಾದ ಮೊಬೈಲ್ ಸಂಖ್ಯೆ :
99806 66220

**ಬೇಕಾಗಿದ್ದಾರೆ**
ಮನೆ ಕೆಲಸ ಮಾಡುವವರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 8 ರಿಂದ ಸಂಜೆ 5.30 ತನಕ ಆಸಕ್ತಿ ಇರುವ ಹೆಣ್ಣು ಮಕ್ಕಳು ಸಂಪರ್ಕಿಸಿ :
84315 29083

**ಕೆಲಸಕ್ಕೆ ಬೇಕಾಗಿದ್ದಾರೆ**
ರೊಟ್ಟಿಗಳನ್ನು ಉದ್ದಲು ಹಾಗೂ ಬೇಯಿಸಲು ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ಸ್ಥಳ : ದಾವಣಗೆರೆ.
98803 00615

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಡಾಲರ್ಸ್ ಕಾಲೋನಿ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೇಕಾಗಿದ್ದಾರೆ**
ಪಾರ್ಟ್ ಟೈಂ ಅಥವಾ ಫುಲ್ ಟೈಂ ಕಂಪ್ಯೂಟರ್ ಆಪರೇಟರ್ (ಪುರುಷ / ಮಹಿಳೆ) ಬೇಕಾಗಿದ್ದಾರೆ. ಹಾಗೂ ಸಿಲೆಂಡರ್ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ.
ದೇವನಗರಿ ಗ್ಯಾಸ್ ಏಜೆನ್ಸಿ
ಹಿರೇಮಠ ಕಾಂಪ್ಲೆಕ್ಸ್, ಕಾಯಿಪೇಟೆ ದಾವಣಗೆರೆ.
98441 14143

**SMART CITY CABS DAVANAGERE**
Minimum 4km Rs - 99/-
Above per km Rs - 25/-
waiting charges per hours Rs - 100/- and 24 service will be available.
Ph : 08192 255555
94811 79933, 99868 18205

**ಸೈಟು ಮಾರಾಟಕ್ಕಿದೆ**
35x50 ಅಳತೆಯ ಸೈಟ್ ನಂ. 6, ಅಮರಾವತಿ ಬಡಾವಣೆ, ಆರ್ಚ್ ಗೇಟ್ ಹತ್ತಿರ, 4ನೇ ಕ್ರಾಸ್, ಅಮರಾವತಿ ರಸ್ತೆ, 4ನೇ ಕ್ರಾಸ್, ಹರಿಹರ ಇಲ್ಲಿ ಸೈಟ್ ಮಾರಾಟಕ್ಕಿದೆ (1850/- ರೂ. ಚದುರಡಿ)
ಮಧ್ಯಾಹ್ನ 3 ಗಂಟೆಯ ನಂತರ ಸಂಪರ್ಕಿಸಿ :
98452 36274

**GODOWN, WAREHOUSE FOR RENT**
4000 sqft, Newly Built, APMC 'A' Block, Davanagere, Contact :
80501 25255

**WANTED IMMEDIATELY**
Experienced full time / part time maths and biology lectures and boys hostel warden for M.E.S. PU College, Anjeneya badavane, 9th cross near Indragiri Chandragiri Appartment, Davangere.
98804 36414, 98800 30171

**ಕೆಲಸಕ್ಕೆ ಬೇಕಾಗಿದ್ದಾರೆ**
ಫೀಲ್ಡ್ ವರ್ಕ್ & ಫೀಲ್ಡ್ ಆಫೀಸರ್
15,000 ರಿಂದ 20,000 ಟಿಎ-ಡಿಎ
ದ್ವಿಚಕ್ರ ವಾಹನ ಹೊಂದಿರಬೇಕು
ಹಾವೇರಿ-ರಾಣೇಬೆನ್ನೂರು, ಬ್ಯಾಡಗಿ ಭಾಗದಲ್ಲಿ
98444 47089
98444 47069

**ಜನ್ಮ ದಿನದ ಶುಭಾಶಯಗಳು**






**ಶ್ರೀಯುತ ಕೆ. ಪುಟ್ಟಪ್ಪ**
ರಿಯಲ್ ಎಸ್ಟೇಟ್ ಉದ್ಯಮಿ,
ಕಂಟ್ರ್ಯಾಕ್ಟರ್

ಇಂದು 61ನೇ ಹುಟ್ಟು ಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಇವರಿಗೆ ಜನ್ಮದಿನದ ಶುಭಾಶಯಗಳು...
ಇವರು ಆಯುರಾರೋಗ್ಯದಿಂದ ನೂರಾರು ಕಾಲ ನಗುನಗುತ್ತಾ ಬಾಳಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶುಭ ಕೋರುವವರು :
✦ ಉಮೇಶ್, ಪ್ರಿನ್ಸಿಪಾಲ್ ✦ ಎಸ್. ಬಸಪ್ಪ ✦ ಎಂ.ಆರ್. ಮಹೇಶ್ವರಪ್ಪ ✦ ದಾಸಕರಿಯಪ್ಪರ ಶ್ರೀನಿವಾಸ್ ✦ ಅರುಣ್‌ಕುಮಾರ್, ಪ್ರಿಂಟಿಂಗ್ ಪ್ರೆಸ್ ✦ ಅರೆಮಲ್ ಶೇಖರ್ ✦ ಅಡಿವೆಪ್ಪ.ಎನ್ ✦ ಪ್ರಭುಸ್ವಾಮಿ ✦ ಚಂದ್ರು ಹೆಚ್., ಉದಯವಾಣಿ ✦ ಅರುಣ್‌ಕುಮಾರ್, ಪ್ರಜಾವಾಣಿ ✦ ಶಶಿಧರ ✦ ಉದಯ್ ✦ ಮುರುಗೇಶ್ ಬಾಳೇಕಾಯಿ ✦ ವಾಸಣ್ಣ, ಕೆ.ಇ.ಬಿ. ✦ ಅಬ್ರಾಹರ್ ✦ ಸತೀಶ್ ✦ ನಿಂಗಪ್ಪ ✦ ರಮೇಶ್
**ಕಾಫಿ ಬಾರ್ ಸ್ನೇಹಿತರ ಬಳಗ, ಪಿ.ಬಿ. ರಸ್ತೆ, ದಾವಣಗೆರೆ.**

**ಮನೆಗಳು ಬಾಡಿಗೆಗೆ ಇವೆ**
ದಾವಣಗೆರೆ ಆಂಜನೇಯ ಬಡಾವಣೆ, ಹೇಮಾವತಿ ಹಾಸ್ಟೆಲ್ ಹಿಂಭಾಗದ ಕಾರ್ನರ್ ಬಿಲ್ಡಿಂಗ್‌ನಲ್ಲಿ 2 BHK ಮನೆಗಳು ಬಾಡಿಗೆಗೆ ಇವೆ. ಸಂಪರ್ಕಿಸಿ :
94483 92975
99866 18266

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಕೆಲಸಕ್ಕೆ ಬೇಕಾಗಿದ್ದಾರೆ**
1) ಸೇಲ್ಸ್ ಗರ್ಲ್ ಕಂ ರಿಸೆಪ್ಷನಿಸ್ಟ್ (ಮಹಿಳೆ) - 2 ಹುದ್ದೆ, ವಿದ್ಯಾರ್ಹತೆ : ಪಿಯುಸಿ, ಟೈಲರಿಂಗ್ ಅನುಭವವುಳ್ಳವರಿಗೆ ಆದ್ಯತೆ.
2) ಟೆಕ್ನಿಕಲ್ ಅಸಿಸ್ಟೆಂಟ್ (ಪುರುಷ) - 1, ವಿದ್ಯಾರ್ಹತೆ : ಪಿಯುಸಿ, ದ್ವಿಚಕ್ರ ವಾಹನ ವುಳ್ಳವರಿಗೆ ಆದ್ಯತೆ, ವೇತನ : 8000-10000/- ಸಂಪರ್ಕಿಸಿ :
95915 01592

**ಹಿಂದೂ ವಧು-ವರರ ಅನ್ವೇಷಣಾ ಕೇಂದ್ರ**
ಮೊದಲನೇ, ಎರಡನೇ ಮದುವೆ. ಸಂಪರ್ಕಿಸಿ :
98442 03090

**ಗೋಡೌನ್ ಬಾಡಿಗೆಗೆ ಇದೆ**
Apmc Market 'E' Block ಚೌಡೇಶ್ವರಿ ದೇವಸ್ಥಾನ ಪಕ್ಕದಲ್ಲಿ 45x120- 2350 Sqft ಒಟ್ಟು ಗೋಡೌನ್ ಇದೆ, ವಿಶಾಲವಾದ ಹಾಗೂ ಲಾರಿ ಒಳಗಡೆ ಹೋಗುವ ಹಾಗೂ ಕರೆಂಟ್ ಹಾಗೂ ಪಾರ್ಕಿಂಗ್ ಜಾಗವಿದ್ದು ಸೌಲಭ್ಯಗಳನ್ನು ಒಳಗೊಂಡಿರುತ್ತದೆ. ಸಂಪರ್ಕಿಸಿ :
98445 39108, 81838 06013
ಗೋಡೌನ್ ಬಾಡಿಗೆಗೆ ಬೇಕಾದಲ್ಲಿ ಈ ಮೇಲಿನ ನಂಬರ್‌ಗೆ ಸಂಪರ್ಕಿಸಿ

**3 BHK ಮನೆ ಬಾಡಿಗೆಗಿದೆ**
1ನೇ ಮಹಡಿ, ನಾರ್ತ್-ಈಸ್ಟ್ ಫೇಸಿಂಗ್, ಎಸ್.ಎಸ್. ಲೇಔಟ್, ಬಿ ಬ್ಲಾಕ್, 4ನೇ ಮೇನ್, 3ನೇ ಕ್ರಾಸ್, ದಾವಣಗೆರೆ. (ಸಸ್ಯಹಾರಿಗಳಿಗೆ ಮಾತ್ರ)
70195 55707

**ಗೋಡೌನ್ / ಹಾಲ್ ಬಾಡಿಗೆಗೆ ಇದೆ**
Play home ಹಾಗೂ School ಹಾಗೂ Agency ಕರೆಂಟ್, ಪಾರ್ಕಿಂಗ್ ಹಾಗೂ ಬಾತ್ ರೂಮ್ ಸೌಲಭ್ಯವಿರುತ್ತದೆ. ಮಹಾಲಕ್ಷ್ಮಿ ಲೇಔಟ್, ಶಿವಗಂಗಾ ಚೌಟ್ರಿ Back side, 9ನೇ ಕ್ರಾಸ್, ದಾವಣಗೆರೆ - 577104,
ಗೋಡೌನ್ ಬೇಕಾದಲ್ಲಿ ಸೌಲಭ್ಯವಿರುತ್ತದೆ.
98445 39108, 81838 06013

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಪಾರ್ಟ್‌ಟೈಂ ಡ್ರೈವರ್ ಬೇಕಾಗಿದ್ದಾರೆ. ಹಾಗೂ ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ. ಸಂಪರ್ಕಿಸಿ :
99640 17729

**ಶಿಕ್ಷಕ/ಶಿಕ್ಷಕಿಯರು ಬೇಕಾಗಿದ್ದಾರೆ**
1) DEd., B.Com., BSc., NTC - 01
2) ದೈಹಿಕ ಶಿಕ್ಷಕರು, ಆಫೀಸ್ ಬಾಯ್- 01
ನಿಸರ್ಗ ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ
ಹೆಚ್‌ಕೆಆರ್ ಸರ್ಕಲ್ ಹತ್ತಿರ, ನಿಟ್ಟುವಳ್ಳಿ ದಾವಣಗೆರೆ. ಮಾಹಿತಿಗಾಗಿ ಸಂಪರ್ಕಿಸಿ:
76764 94295, 98444 43374

SPBVS
**AKSHAR ENGLISH HIGHER PRIMARY SCHOOL DAVANGERE**
We are Hiring Teachers
qualification : Bsc., M.Sc., B.Ed., & Hindi Teachers
9731100216, 9844256380

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ಸೈಟು, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಸರ್ಕಾರಿ ನೌಕರರ ಬಡಾವಣೆಯಲ್ಲಿ 'B' ಬ್ಲಾಕ್‌ನಲ್ಲಿ 30x50 ಪೂರ್ವ, 30x40 ಪೂರ್ವ ಬೈಪಾಸ್ ಸರ್ವೀಸ್ ರಸ್ತೆಗೆ 30x55 ದಕ್ಷಿಣ (ಕಮರ್ಷಿಯಲ್) ವಿನಾಯಕ ಬಡಾವಣೆಯಲ್ಲಿ 30x50 ಪೂರ್ವ-ದಕ್ಷಿಣ ಕಾರ್ನರ್ ಸೈಟುಗಳು ಮಾರಾಟಕ್ಕಿವೆ. ಹೊಸ ಕುಂದುವಾಡದಲ್ಲಿ ರೋಹನ್ ಗಾರ್ಡನ್‌ನಲ್ಲಿ 3 ಸೈಟ್ ಉತ್ತರ 30x50 ಇವೆ. ಸಂಪರ್ಕಿಸಿ : ಸುರೇಶ್ P S
ಶಾಮನೂರು (ಪ್ರಾಪರ್ಟಿ ಅಡ್ವೈಸರ್)
84314 00907

**ಸೈಟ್, ಮನೆ ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ ಮನೆ 30x50, (2400 sqft) ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51, ಪಶ್ಚಿಮ, ಹಳೇ ಕುಂದವಾಡ ಸೈಟ್ 30x50 ಪಶ್ಚಿಮ
91481 25125

**ಕೆಲಸಕ್ಕೆ ಬೇಕಾಗಿದ್ದಾರೆ**
ಹೋಲ್‌ಸೇಲ್ (ಸಗಟು) ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು, ದಾವಣಗೆರೆ ನಗರದಲ್ಲಿ ಹಾಗೂ ನಗರದಿಂದ ಹೊರಗೆ ಕೆಲಸ ಮಾಡಲು ಸೇಲ್ಸ್ ಬಾಯ್ (ಹುಡುಗರು) ಬೇಕಾಗಿದ್ದಾರೆ. ವೃಷಭ್ ಮೆಡಿಕಲ್ಸ್
ಜಾಲಿನಗರ, ಶಿವಾಲಿ ರಸ್ತೆ, ದಾವಣಗೆರೆ-6
99805 32781

**ಕೆಲಸಗಾರರು ಬೇಕಾಗಿದ್ದಾರೆ**
ಸುಪ್ರೀತ್ ಮೋಟಾರ್ಸ್, ಭಾಷ್ ಕಾರ್ ಸರ್ವೀಸ್ ಶಿರಮಗೊಂಡನಹಳ್ಳಿ ಹತ್ತಿರ, ಚನ್ನಗಿರಿ ರಸ್ತೆ, ದಾವಣಗೆರೆ. 3 ರಿಂದ 5 ವರ್ಷ ಅನುಭವವಿರುವ ಚೀಫ್ ಮೆಕ್ಯಾನಿಕ್, ಕಾರ್ ಟಿಂಕರಿಂಗ್ & ಪೇಂಟಿಂಗ್ ಕೆಲಸಕ್ಕೆ ಕೆಲಸಗಾರರು ಬೇಕಾಗಿದ್ದಾರೆ.
80738 47422, 93800 15165

**WANTED**
**FEMALE ACCOUNTANT**
Tally Knowledge
5 Yrs. Experience
**B.M. BONDADE AND ASSOCIATES**
Vinoba Nagar, P.B. Road, Davanagere - 06.
98865 08965
98869 77879

**SITE FOR SALE**
35x60 size,
RATE 4000/- SFT
SIDDHAGANGA LAYOUT NEAR S.S. HOSPITAL, DAVANAGERE
MOB: 9663976448
9008493814

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠ್. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮಳಿಗೆ ಬಾಡಿಗೆಗೆ ಇದೆ**
ಈ ಕೆಳಕಂಡ ವಿಳಾಸದಲ್ಲಿ 30x40 ಅಡಿ ಅಳತೆಯ ಮಳಿಗೆ ಬಾಡಿಗೆಗೆ ಲಭ್ಯವಿದೆ. ಆಫೀಸ್ ರೂಂ, ಶೌಚಾಲಯ, ವಿದ್ಯುತ್ ಮತ್ತು ನೀರಿನ ಸೌಲಭ್ಯ, ಉತ್ತರ ದಿಕ್ಕು, ಬ್ಯಾಂಕ್, ಮಾಲ್, ಏಜೆನ್ಸಿ, ಜೀವವಿಮೆ ನಂತಹ ಕಛೇರಿಗಳಿಗೆ ಸೂಕ್ತವಾಗಿದೆ. #1652, 60 ಅಡಿ ಜೋಡು ರಸ್ತೆ (ಡಬ್ಬಲ್ ರೋಡ್) ಮಹಿಳಾ ಹಾಸ್ಟೆಲ್ ಹತ್ತಿರ, ಶಾಮನೂರು, ದಾವಣಗೆರೆ.
94489 63300, 88920 88250

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ನೇತ್ರದಾನ ಮಹಾದಾನ**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

# ಬಿಐಇಟಿ 'ನಮ್ಮ ದವನ'ದಲ್ಲಿ ಡಾಲಿ ಧನಂಜಯ್





ದಾವಣಗೆರೆ, ಮೇ 31- ನಗರದ ಬಿಐಇಟಿ ಕಾಲೇಜಿನಿಂದ ಕಾಲೇಜು ಆವರಣದಲ್ಲಿ ಶುಕ್ರವಾರ ಸಂಜೆ 'ನಮ್ಮ ದವನ'24' ಸಮಾರಂಭವನ್ನು ಸಂಭ್ರಮದಿಂದ ಉದ್ಘಾಟಿಸಲಾಯಿತು.

ಚಿತ್ರನಟ ಡಾಲಿ ಧನಂಜಯ, ಕಲಾವಿದ ಅಲೋಕ್ ಬಾಬು ಆರ್., ಬಿಐಇಟಿ ಪ್ರಾಂಶುಪಾಲ ಡಾ.ಹೆಚ್.ಬಿ. ಅರವಿಂದ್, ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ, ಡೀನ್‌ಗಳಾದ ಡಾ. ಜಿ.ಪಿ. ದೇಸಾಯಿ, ಡಾ.ವಿನುತಾ ಹೆಚ್.ಪಿ. ಇತರರು ಈ ಸಂದರ್ಭದಲ್ಲಿದ್ದರು.

ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ನಟ ಡಾಲಿ ಧನಂಜಯ್, ಸಮಾರಂಭಕ್ಕೆ ಶುಭ ಹಾರೈಸಿದರಲ್ಲದೇ, ಡೈಲಾಗ್‌ಗಳ ಮೂಲಕ ವಿದ್ಯಾರ್ಥಿಗಳ ಮನ ರಂಜಿಸಿದರು. ಡಾಲಿ ಮಾತನಾಡುತ್ತಾಲೇ ವಿದ್ಯಾರ್ಥಿಗಳು ಕೇಕೆ ಹಾಕಿ ಸಂಭ್ರಮಿಸಿದರು.


ಮುಂದಿನ ಸಿನಿಮಾ 'ಕೋಟಿ' ಇದೇ ಜೂನ್ 14ರಂದು ಬಿಡುಗಡೆಯಾಗುತ್ತಿದೆ. ಎಲ್ಲರೂ ಕುಟುಂಬ ಸಹಿತ ಬಂದು ನೋಡುವಂತೆ ಮನವಿ ಮಾಡಿದರು.

ನನಗೆ ಹುಷಾರಿರಲಿಲ್ಲ. ಇಲ್ಲಿ ವೇದಿಕೆಗೆ ಬರುವಷ್ಟರಲ್ಲಿ ಮತ್ತಷ್ಟು ಸುಸ್ತಾಯಿತು. ಆದರೆ ನಿಮ್ಮ ಜೋಷ್ ನೋಡಿ ನನ್ನ ಸುಸ್ತು ಕಡಿಮೆಯಾಗುತ್ತಿದೆ ಎಂದ ಧನಂಜಯ್, ನಾವು ನಿರಂತರ ಕಠಿಣ ಶ್ರಮದಿಂದ ಕೆಲಸ ಮಾಡುತ್ತೇವೆ. ಅದಕ್ಕಿಂತ ಸಾರ್ಥಕತೆ ಬೇರೆ ಯಾವುದೂ ಇಲ್ಲ ಎಂದರು.

ನಾನಂತೂ ಚಿಕ್ಕವನಿದ್ದಾಗ 1 ಕೋಟಿ ಸಿಕ್ರೆ ಚೆನಾಗಿರುತ್ತೆ. ಅಂತ ಯೋಚಿಸುತ್ತಿದ್ದೆ. ನಂತರ 1 ಕೋಟಿ ದುಡಿಯಬೇಕು ಎಂಬ ಹಂಬಲ ಉಂಟಾಯಿತು. ಈ ರೀತಿಯ ಕನಸು ಕಾಣುವವರೆಲ್ಲಾರೂ ಕೋಟಿ ಚಿತ್ರ ನೋಡಿ. ಆ ಮೇಲೆ ಎಲ್ಲರೂ ಕೋಟಿ ದುಡಿಯುತ್ತೀರಿ ಎಂದರು.

ದಾವಣಗೆರೆ ಬಿಐಇಟಿ ಕಾಲೇಜಿಗೆ ಯಾವಾಗ ಬಂದರೂ ಇದೇ ಜೋಷ್ ಇರುತ್ತದೆ. ನನ್ನ ಸಿನಿಮಾ ಬಿಡುಗಡೆಯಾದ ನಂತರ ಮತ್ತೆ ದಾವಣಗೆರೆಗೆ ಬರುತ್ತೇನೆ ಎಂದು ಡಾಲಿ ಹೇಳಿದರು.

# ಬಿಸಿಲ ಆಘಾತಕ್ಕೆ ಸಿಲುಕಿ 25 ಚುನಾವಣಾ ಸಿಬ್ಬಂದಿ ಸಾವು



ನವದೆಹಲಿ, ಮೇ 31 – ಲೋಕಸಭಾ ಚುನಾವಣೆಗಾಗಿ ಉತ್ತರ ಪ್ರದೇಶ ಹಾಗೂ ಬಿಹಾರದಲ್ಲಿ ನೇಮಿಸಿದ್ದ 25 ಸಿಬ್ಬಂದಿ ಬಿಸಿಲ ಆಘಾತಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ. ದೇಶದ ಬಹುತೇಕ ಭಾಗಗಳಲ್ಲಿ ಬಿಸಿ ಗಾಳಿಯ ಪ್ರಕೋಪ ಹೆಚ್ಚಾಗಿದ್ದು, ಶುಕ್ರವಾರ 40ಕ್ಕೂ ಹೆಚ್ಚು ಜನ ಸಾವನ್ನಪ್ಪಿದ್ದಾರೆ.

ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚಿನ 17, ಬಿಹಾರದಲ್ಲಿ 14, ಒಡಿಶಾದಲ್ಲಿ 5 ಹಾಗೂ ಜಾರ್ಖಂಡ್‌ನಲ್ಲಿ ನಾಲ್ಕು ಸಾವುಗಳು ಸಂಭವಿಸಿವೆ. ಬಿಸಿಲ ಆಘಾತಕ್ಕೆ ಸಿಲುಕಿ 1,300ಕ್ಕೂ ಹೆಚ್ಚು ಜನರು ಆಸ್ಪತ್ರೆಗೆ ದಾಖಲಾಗಿದ್ದಾರೆ.

ರಾಜಧಾನಿ ದೆಹಲಿಯಲ್ಲಿ ಬಿಸಿಲ ಬೇಗೆಯ ಜೊತೆಗೆ ನೀರಿನ ತೀವ್ರ ಕೊರತೆಯೂ ಭುಗಿಲೆದ್ದಿದೆ. ಜನರು ನೀರಿಗಾಗಿ ಉದ್ದನೆಯ ಸರದಿಯಲ್ಲಿ ನಿಲ್ಲುವಂತಾಗಿದೆ. ಮುಂದಿನ ಎರಡು ಮೂರು ದಿನಗಳ ಕಾಲ ಬಿಸಿಲ ಬೇಗೆ ಮುಂದುವರೆಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಪ್ರದೇಶದ ಮಿರ್ಜಾಪುರದಲ್ಲಿ 13 ಹಾಗೂ ಸೋನಭದ್ರದಲ್ಲಿ ಇಬ್ಬರು ಚುನಾವಣಾ ಸಿಬ್ಬಂದಿ ಬಿಸಿಲ ಆಘಾತದಿಂದ ಸಾವನ್ನಪ್ಪಿದ್ದಾರೆ.

ಏಳು ಹೋಂ ಗಾರ್ಡ್‌ಗಳು, ಮೂವರು ಸ್ವಚ್ಛತಾ ಸಿಬ್ಬಂದಿ, ಮುಖ್ಯ ವೈದ್ಯಕೀಯ ಅಧಿಕಾರಿ ಕಚೇರಿಯ ಗುಮಾಸ್ತ, ಚಕ್‌ಬಂದಿ ಅಧಿಕಾರಿ ಹಾಗೂ ಹೋಂ ಗಾರ್ಡ್ ತಂಡದ ಸಹಾಯಕರೊಬ್ಬರು ಸಾವನ್ನಪ್ಪಿರುವುದಾಗಿ ಮಿರ್ಜಾಪುರದ ಮಾ ವಿಧ್ಯಾವಾಸಿನಿ ಸ್ವಾಯತ್ತ ಸರ್ಕಾರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ರಾಜ್ ಬಹದ್ದೂರ್ ಕಮಲ್ ಹೇಳಿದ್ದಾರೆ.

ಇವರೆಲ್ಲರೂ ತೀವ್ರ ಜ್ವರ ಹಾಗೂ ರಕ್ತದೊತ್ತಡದ ಕಾರಣದಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಕಳೆದ ಕೆಲ ದಿನಗಳಿಂದ ಈ ಭಾಗದಲ್ಲಿ ತಾಪಮಾನ ತೀವ್ರ ಹೆಚ್ಚಾಗಿದೆ. ಶನಿವಾರದಂದು ಚುನಾವಣೆ ನಡೆಯಲಿದೆ.

ಸೋನಭದ್ರ ಜಿಲ್ಲೆಯಲ್ಲಿ ಬಿಸಿಲ ಆಘಾತಕ್ಕೆ ಸಿಲುಕಿ ಇಬ್ಬರು ಚುನಾವಣಾ ಸಿಬ್ಬಂದಿ ಸಾವನ್ನಪ್ಪಿದ್ದಾರೆ ಹಾಗೂ ಒಂಭತ್ತು ಜನ ಅಸ್ವಸ್ಥಗೊಂಡಿದ್ದಾರೆ ಎಂದು ಜಿಲ್ಲೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಂಭತ್ತು ಜನರಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಜಿಲ್ಲಾಧಿಕಾರಿ ಚಂದ್ರ ವಿಜಯ್ ಸಿಂಗ್ ತಿಳಿಸಿದ್ದಾರೆ. ಬಿಸಿಲ ಆಘಾತದಿಂದಾಗಿ ಚುನಾವಣಾ ಸಿಬ್ಬಂದಿ ಅನಾರೋಗ್ಯ ಪೀಡಿತರಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ಬಿಹಾರದಲ್ಲಿ ಕಳೆದ 24 ಗಂಟೆಗಳಲ್ಲಿ ಬಿಸಿಲ ಆಘಾತಕ್ಕೆ ಸಿಲುಕಿ 14 ಜನ ಸಾವನ್ನಪ್ಪಿದ್ದಾರೆ. ಇವರಲ್ಲಿ ಹತ್ತು ಜನ ಚುನಾವಣಾ ಸಿಬ್ಬಂದಿ ಸೇರಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭೋಜಪುರ್ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಾವುಗಳು ಸಂಭವಿಸಿವೆ. ಇಲ್ಲಿ ನಿಯೋಜಿತರಾಗಿದ್ದ ಐವರು ಚುನಾವಣಾ ಅಧಿಕಾರಿಗಳು ಬಿಸಿಲ ಆಘಾತಕ್ಕೆ ಸಿಲುಕಿ ಸಾವನ್ನಪ್ಪಿದ್ದಾರೆ.

ರಾಜ್ಯದ ಹಲವೆಡೆ ತಾಪಮಾನ 43 ಡಿಗ್ರಿ ಸೆಲ್ಸಿಯಸ್ ದಾಟಿದೆ. ಔರಂಗಾಬಾದ್‌ನಲ್ಲಿ ಅತಿ ಹೆಚ್ಚಿನ 44 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

# ಹರಪನಹಳ್ಳಿ ಸರ್ಕಾರಿ ಕನ್ನಡ-ಆಂಗ್ಲ ಮಾಧ್ಯಮ ಶಾಲೆ ಅದ್ದೂರಿ ಆರಂಭ



ಹರಪನಹಳ್ಳಿ, ಮೇ 31- ಇಲ್ಲಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಇಲಾಖೆಯಿಂದ ನೂತನವಾಗಿ ಪ್ರಾರಂಭ ಮಾಡಿರುವ ಎಲ್‌ಕೆಜಿ, ಯುಕೆಜಿ ಮತ್ತು 1ನೇ ತರಗತಿ ಆಂಗ್ಲ ಮಾಧ್ಯಮ ಮತ್ತು 1ರಿಂದ 8ನೇ ತರಗತಿವರೆಗೆ ಕನ್ನಡ ಮಾಧ್ಯಮ ವಿದ್ಯಾರ್ಥಿಗಳನ್ನು ಒಳಗೊಂಡಂತೆ ಇಂದು ಶಾಲಾ ಪ್ರಾರಂಭೋತ್ಸವವನ್ನು ಅದ್ದೂರಿಯಾಗಿ ಮಾಡಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿ ಯು. ಬಸವರಾಜಪ್ಪ ಚಾಕೋಲೇಟ್ ವಿತರಿಸುವ ಮೂಲಕ ಮಕ್ಕಳನ್ನು ಶಾಲೆಗೆ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಎಲ್‌ಕೆಜಿ 30, ಯುಕೆಜಿ 30 ಮತ್ತು 1ನೇ ತರಗತಿಗೆ 30 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ಬಡ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಲು ಇದು ಸಹಕಾರಿಯಾಗಿದೆ. ಈ ಶಾಲೆಯಲ್ಲಿ ಉತ್ತಮ ಶಿಕ್ಷಣ ನೀಡಲು ಇಲಾಖೆ ಆದೇಶದಂತೆ ಆಂಗ್ಲ ಮಾಧ್ಯಮಕ್ಕೆ 3 ಜನ ಅತಿಥಿ ಶಿಕ್ಷಕರ ನೇಮಕ ಮಾಡಲಾಗಿದೆ ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷರಾದ ಎಂ. ರೇಖಾ, ಸದಸ್ಯರಾದ ಸತ್ಯಭೋದೆ, ಮುಖ್ಯಗುರುಗಳಾದ ಸಲೀಮ್ ಹೆಚ್, ಶಿಕ್ಷಕರಾದ ಎನ್.ಜಿ ಚಿದಾನಂದಪ್ಪ, ಎಂ.ಶಿವಯೋಗಿ, ಅಜಯ್ ಎಸ್. ಗುಡುಗೂರು, ಎಂ. ಅಂಜಿನಪ್ಪ, ಮಂಜಪ್ಪ ಬಣಕಾರ್ ಮತ್ತು ಎಲ್ಲ ಶಿಕ್ಷಕರು ಹಾಜರಿದ್ದರು.

# ಭವಾನಿ ನಿರೀಕ್ಷಣಾ ಜಾಮೀನಿಗೆ ಕೋರ್ಟ್ ನಕಾರ

ಬೆಂಗಳೂರು, ಮೇ 31 – ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಪ್ರಜ್ವಲ್ ರೇವಣ್ಣ ತಾಯಿ ಭವಾನಿ ರೇವಣ್ಣ ದಾಖಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಳ್ಳಿ ಹಾಕಿದೆ.

ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡ ಅವರ ಸೊಸೆ ಭವಾನಿ, ಬುಧವಾರ ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ದಾಖಲಿಸಿದ್ದರು. ಮೈಸೂರಿನ ಕೆ.ಆರ್. ನಗರದ ಮಹಿಳೆ ಅಪಹರಿಸಿದ ಆರೋಪ ಅವರ ಮೇಲಿದೆ.

ವಿಶೇಷ ತನಿಖಾ ತಂಡವು ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಹಾಗೂ ಲೈಂಗಿಕ ಪೀಡನೆ ಪ್ರಕರಣದ ತನಿಖೆ ನಡೆಸುತ್ತಿದೆ. ಈ ನಡುವೆಯೇ, ಶಾಸಕ ಹೆಚ್.ಡಿ. ರೇವಣ್ಣ ಹಾಗೂ ಪತ್ನಿ ಭವಾನಿ ವಿರುದ್ಧ ಅಪಹರಣದ ಪ್ರಕರಣ ದಾಖಲಿಸಲಾಗಿತ್ತು.

ಮನೆಕೆಲಸದ ಮಹಿಳೆಯ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಭವಾನಿ ವಿಚಾರಣೆಯ ಅಗತ್ಯವಿದೆ ಎಂದು ವಿಶೇಷ ತನಿಖಾ ತಂಡ ತಿಳಿಸಿತ್ತು. ಶನಿವಾರದಂದು ಹೊಳೆನರಸೀಪುರದ ಭವಾನಿ ಅವರ ಮನೆಯಲ್ಲಿ ವಿಚಾರಣೆ ನಡೆಸಲಾಗುವುದು, ಅಲ್ಲಿ ಹಾಜರಿರುವಂತೆ ತನಿಖಾ ತಂಡ ತಿಳಿಸಿದೆ.

## ನಗರದಲ್ಲಿ ಇಂದು 'ನಮ್ಮ ದವನ-24' ಸಮಾರೋಪ

ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಇಂದು ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ದಾವಣಗೆರೆ ವಿವಿ ಕುಲಪತಿ ಪ್ರೊ.ಬಿ.ಡಿ. ಕುಂಬಾರ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದು, ಕನ್ನಡ ರಾಪರ್ ಆಲ್ ಓಕೆ ಖ್ಯಾತಿಯ ಅಲೋಕ್ ಬಾಬು ಮತ್ತು ಸಂಗಡಿಗರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಪ್ರಾಚಾರ್ಯ ಡಾ.ಹೆಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಲಿದ್ದು, ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮತ್ತಿತರರು ಭಾಗವಹಿಸಲಿದ್ದಾರೆ.

# ವಿದ್ಯಾರ್ಥಿ ಜೀವನದ ವ್ಯಸನದಿಂದ ಭವಿಷ್ಯ ಹಾಳು

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ



ದಾವಣಗೆರೆ, ಮೇ 31 - ವಿದ್ಯಾರ್ಥಿ ಜೀವನದಲ್ಲಿ ತಂಬಾಕು ಇತ್ಯಾದಿ ಮಾದಕಗಳ ವ್ಯಸನಕ್ಕೆ ಸಿಲುಕಿದರೆ ಆರೋಗ್ಯದ ಜೊತೆಗೆ ಜೀವನವೂ ಹಾಳಾಗುತ್ತದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ ರಾಜೇಶ್ವರಿ ಎನ್. ಹೆಗಡೆ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನಗರ ಪಾಲಿಕೆ, ಚಿಗಟೇರಿ ಜಿಲ್ಲಾ ಆಸ್ಪತ್ರೆ, ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ಜಿಲ್ಲಾ ವಕೀಲರ ಸಂಘ, ಅಶ್ವಿನಿ ಆಯುರ್ವೇದ ಮೆಡಿಕಲ್ ಕಾಲೇಜು ಹಾಗೂ ವಿ.ಎಸ್. ಪ್ಯಾರಾಮೆಡಿಕಲ್ ಕಾಲೇಜುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ತಂಬಾಕು ರಹಿತ ದಿನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿ ದೆಸೆಯಲ್ಲಿ ಮಾದಕದ ವ್ಯಸನಕ್ಕೆ ಸಿಲುಕುವ ಅಪಾಯ ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳು ಮಾದಕದ ವ್ಯಸನಕ್ಕೆ ಸಿಲುಕಿದರೆ ಮುಂದಿನ ಪೀಳಿಗೆಯ ಗತಿ ಏನಾಗಲಿದೆ? ಮಕ್ಕಳ ಭವಿಷ್ಯದ ದೃಷ್ಟಿಯಿಂದ ಶಾಲೆಗಳಲ್ಲಿ ಮಾದಕದ ಅರಿವು ಕಾರ್ಯಕ್ರಮಗಳನ್ನು ನಿರಂತರವಾಗಿ ಕೈಗೊಳ್ಳಬೇಕು ಎಂದು ನ್ಯಾಯಾಧೀಶೆ ರಾಜೇಶ್ವರಿ ಹೆಗಡೆ ತಿಳಿಸಿದರು.

ಮಾದಕಗಳಿಂದ ಮನಸ್ಸಿನ ಒತ್ತಡ ಕಡಿಮೆಯಾಗುತ್ತದೆ ಎಂಬುದು ತಪ್ಪು ಕಲ್ಪನೆ. ಮಾದಕಗಳು ವ್ಯಸನವಾಗಿ ಮಾರ್ಪಟ್ಟು, ಮಾನಸಿಕ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತವೆ ಎಂದವರು ತಿಳಿಸಿದರು.

ವ್ಯಸನಕ್ಕೆ ಸಿಲುಕಿದವರಿಗೆ ನೆರವಾಗಲು ಸಿ.ಜಿ. ಜಿಲ್ಲಾ ಆಸ್ಪತ್ರೆಯಲ್ಲಿ ಸೌಲಭ್ಯವಿದೆ. ಮಾದಕ ವ್ಯಸನ ಮುಕ್ತರಾಗಲು ಬಯಸುವವರು ಇಲ್ಲಿ ನೆರವು ಪಡೆಯಬೇಕು ಎಂದವರು ಕಿವಿಮಾತು ಹೇಳಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾವೀರ ಎಂ.ಕರೆಣ್ಣವರ್ ಮಾತನಾಡಿ, ಜಾಹೀರಾತುಗಳಲ್ಲಿ ತೋರಿಸುವ ವೈಭವೀಕರಣದಿಂದಾಗಿ ಯುವ ಜನತೆ ದಾರಿ ತಪ್ಪುತ್ತಿದೆ. ಈ ಸಮಸ್ಯೆ ನಿವಾರಿಸುವಲ್ಲಿ ಸಾರ್ವಜನಿಕರ ಸಹಭಾಗಿತ್ವ ಅಗತ್ಯ ಎಂದು ಹೇಳಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಮಾತನಾಡಿ, ಉದ್ದಿಮೆದಾರರ ಕುತಂತ್ರದ ಜಾಹೀರಾತಿನಿಂದ ವೀಕ್ಷಕರು ಉತ್ತೇಜನ ಆಗುತ್ತಿದ್ದಾರೆ. ತಂಪು ಪಾನೀಯಗಳು, ತಂಬಾಕು ಉತ್ಪನ್ನಗಳನ್ನು ತಯಾರಿಸುವ ಉದ್ದಿಮೆದಾರರು ಜಾಹೀರಾತುಗಳನ್ನು ತೋರಿಸುವುದೇ ಬೇರೆ, ಉತ್ಪನ್ನಗಳು ಇರುವುದು ಬೇರೆ. ಆದರೆ ಇದನ್ನು ತಿಳಿಯದೇ ಯುವ ಪೀಳಿಗೆ ಮಾತ್ರವಲ್ಲದೆ ಮಕ್ಕಳು ಸಹ ಜಾಹೀರಾತಿಗೆ ಮಾರು ಹೋಗಿ ದುಶ್ಚಟಗಳಿಗೆ ದಾಸರಾಗಿ ತಮ್ಮ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮಾಧಿಕಾರಿ ಡಾ. ಜಿ.ಡಿ. ರಾಘವನ್, ಭಾರತದ ಶೇ.22ರಷ್ಟು ಮಕ್ಕಳು ಒಂದಲ್ಲಾ ಒಂದು ರೀತಿ ತಂಬಾಕಿನ ರುಚಿ ನೋಡಿರುತ್ತಾರೆ ಎಂಬುದು ಸಮೀಕ್ಷೆಯೊಂದರಿಂದ ತಿಳಿದು ಬಂದಿದೆ. ಹೀಗಾಗಿ ಮಕ್ಕಳಲ್ಲಿ ತಂಬಾಕಿನ ಅಪಾಯದ ಹೆಚ್ಚಿನ ಅರಿವು ಮೂಡಿಸುವುದು ಮುಖ್ಯ ಎಂದು ತಿಳಿಸಿದರು.

ಶಾಲೆಯಿಂದ ಹೊರ ಬಿದ್ದ ಮಕ್ಕಳು ಹಾಗೂ ಸ್ಲಂನಲ್ಲಿರುವ ಮಕ್ಕಳು ತಂಬಾಕು ವ್ಯಸನಕ್ಕೆ ಸಿಲುಕುವುದು ಹೆಚ್ಚಾಗುತ್ತಿದೆ. ಹೀಗಾಗಿ ಪ್ರತಿ ವರ್ಷ 100 ಶಾಲೆಗಳನ್ನು ದತ್ತು ತೆಗೆದುಕೊಂಡು, ಅಲ್ಲಿನ ಮಕ್ಕಳಲ್ಲಿ ತಂಬಾಕು ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದವರು ಹೇಳಿದರು.

ಪಾಲಿಕೆ ಆಯುಕ್ತೆ ರೇಣುಕ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಅಪರ ಜಿಲ್ಲಾಧಿಕಾರಿ ಸೈಯದಾ ಅಫ್ರೀನ್ ಭಾನು ಎಸ್. ಬಳ್ಳಾರಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಎಸ್. ಷಣ್ಮುಖಪ್ಪ, ರಾಷ್ಟ್ರೀಯ ಬಾಯಿ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ. ಪಿ.ಎಂ. ತಿಪ್ಪೇಸ್ವಾಮಿ, ಪಾಲಿಕೆ ಆರೋಗ್ಯಾಧಿಕಾರಿ ಡಾ. ಡಿ.ಎಂ. ಚಂದ್ರಮೋಹನ್, ಅಶ್ವಿನಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯ ಡಾ. ಎಲ್.ಎಂ. ಜ್ಞಾನೇಶ್ವರ್, ವಿ.ಎಸ್. ಪ್ಯಾರಾಮೆಡಿಕಲ್ ಕಾಲೇಜಿನ ಕಾರ್ಯದರ್ಶಿ ಶ್ವೇತಾ ರಂಗನಾಥ್ ಮತ್ತಿತರರು ಉಪಸ್ಥಿತರಿದ್ದರು.

### ಗ್ರಾಹಕರ ಸಾವಿನ ನಂತರ ಹೊಸಬರ ಹುಡುಕಾಟ

ಪ್ರತಿ ವರ್ಷ ವಿಶ್ವದಾದ್ಯಂತ ತಂಬಾಕು ವ್ಯಸನದಿಂದ 8 ದಶಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ತಂಬಾಕು ಕಂಪನಿಗಳು ಇವರ ಜಾಗಕ್ಕೆ ಹೊಸ ಗ್ರಾಹಕರನ್ನು ಹುಡುಕುತ್ತಿರುತ್ತವೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಜಿ.ಡಿ. ರಾಘವನ್ ಹೇಳಿದರು.

15 ಸಾವಿರದಷ್ಟು ಸುವಾಸಿತ ಉತ್ಪನ್ನಗಳ ಮೂಲಕ ತಂಬಾಕು ವ್ಯಸನಕ್ಕೆ ಸೆಳೆಯಲು ಕಂಪನಿಗಳು ಪ್ರಯತ್ನ ನಡೆಸುತ್ತಿವೆ. ಸಾಮಾಜಿಕ ಮಾಧ್ಯಮಗಳ ಮೂಲಕ ತಂಬಾಕಿನ ಪ್ರಚಾರ ಮಾಡಲಾಗುತ್ತಿದೆ. ಈ ಬಗ್ಗೆ ಎಚ್ಚರ ವಹಿಸಬೇಕಿದೆ ಎಂದರು.

# ವೃದ್ಧಾಶ್ರಮ : ವಿದ್ಯಾರ್ಥಿಗಳಿಂದ ಅರಿವು ಮೂಡಿಸುವ ಬೀದಿ ನಾಟಕ




ದಾವಣಗೆರೆ, ಮೇ 31- ದವನ್ ಪದವಿ ಕಾಲೇಜಿನಿಂದ ನಡೆಯಲಿರುವ ಸ್ಫೂರ್ತಿ ಯುವ ಜನೋತ್ಸವದ ಅಂಗವಾಗಿ ಪ್ರಥಮ ಬಿ.ಕಾಂ. ವಿದ್ಯಾರ್ಥಿಗಳು ನಗರದ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಸಾಯಿಬಾಬಾ ದೇವಸ್ಥಾನದ ಮುಂದೆ ವೃದ್ಧಾಶ್ರಮದ ಬಗ್ಗೆ ಒಂದು ಕಿರು ನಾಟಕವನ್ನು ಪ್ರದರ್ಶಿಸಿದರು.

ಶಾಲೆಯ ಹತ್ತಿರ ಬಿಟ್ಟು ಹೋಗುವಾಗ ನೀನು ನಿಮ್ಮ ತಂದೆ-ತಾಯಿಯನ್ನು ನೋಡುವ ರೀತಿ ವೃದ್ಧಾಶ್ರಮದಲ್ಲಿ ಬಿಟ್ಟು ಹೋಗುವಾಗ ನಿಮ್ಮ ತಾಯಿ-ತಂದೆ ನೋಡುವ ರೀತಿ ಒಂದೇ ಆಗಿರುತ್ತದೆ. ನಿನ್ನ ನೋವು ಶಾಲೆಯ ಗಂಟೆ ಹೊಡೆದ ನಂತರ ಮಾಯವಾಗುತ್ತದೆ. ಆದರೆ, ಅವರ ನೋವು ಹೃದಯ ನಿಲ್ಲುವವರೆಗೆ ಹೋಗುವುದಿಲ್ಲ. ಕಾರಣ, ಹೆತ್ತವರನ್ನು ನೋಡಿಕೊಳ್ಳುವುದು ಮಕ್ಕಳಾದವರ ಧರ್ಮವಾಗಿದೆ. ವೃದ್ಧಾಶ್ರಮಕ್ಕೆ ಕಳುಹಿಸುವ ತಪ್ಪನ್ನು ಯಾರೂ ಮಾಡಬಾರದು.

ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ವೃದ್ಧಾಶ್ರಮದ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳು ಕಿರು ನಾಟಕದ ಮೂಲಕ ಅರಿವು ಮೂಡಿಸಿದರು.

ತರಗತಿ ಉಸ್ತುವಾರಿ ಎಂ.ಸಿ. ರೂಪಾ, ಬೀದಿ ನಾಟಕ ಸ್ಪರ್ಧೆಯ ಉಸ್ತುವಾರಿ ಅರುಣ್ ಚೌಹಾಣ್, ತೀರ್ಪುಗಾರರಾದ ತೃಪ್ತೆ ಜನ್ನು, ಕೆ.ಎಂ. ಅಶ್ವಿನಿ ಹಾಗೂ ಪ್ರಥಮ ಬಿ.ಕಾಂ. ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ವಿದ್ಯಾರ್ಥಿನಿಯರ ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಮೇ 31 - ಬಸವ ಬಳಗದ ವತಿಯಿಂದ ವಿದ್ಯಾರ್ಥಿ ನಿಲಯದಲ್ಲಿ ಪಿ.ಯು.ಸಿ., ಡಿಗ್ರಿ,ಇಂಜಿನಿಯರಿಂಗ್ ಮತ್ತು ಬಿ.ಎಸ್.ಸಿ. ಬಿಎಡ್ ಹಾಗೂ ನರ್ಸಿಂಗ್ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ 2024-25ನೇ ಸಾಲಿಗೆ ಪ್ರವೇಶ ಪ್ರಾರಂಭವಾಗಿದೆ. ವಿವರಕ್ಕೆ ಸಂಪರ್ಕಿಸಿ: 99720 84938, 90084 09498.

## ನಗರದಲ್ಲಿ ಇಂದು ವಾರ್ಷಿಕೋತ್ಸವ

ಜಯನಗರದ ಮಾತೃದೇವೋ ಟ್ರಸ್ಟ್‌ನಲ್ಲಿ ಇಂದು ಬೆಳಿಗ್ಗೆ ಮಾತೃದೇವೋ ಸಮಾಜ ಕಲ್ಯಾಣ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್‌ನ 4ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ನಡೆಯಲಿದೆ.

ಶ್ರೀ ಬಸವ ಪ್ರಭು ಸ್ವಾಮೀಜಿ ಮತ್ತು ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಸಾನ್ನಿಧ್ಯ ವಹಿಸಲಿದ್ದು, ಸಂಸದ ಜಿ.ಎಂ ಸಿದ್ದೇಶ್ವರ, ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಲೋಕಿಕೆರೆ ನಾಗರಾಜ್, ಬಿ.ಜಿ. ಅಜಯ್ ಕುಮಾರ್ ಅಧ್ಯಕ್ಷತೆ ವಹಿಸುವರು.

ನಾಗಮ್ಮ ಓಬಳೇಶಪ್ಪ, ದೇವರಮನೆ ಶಿವಕುಮಾರ್, ಕೆ.ಆರ್. ಜಯಶೀಲಾ, ಜಿ.ವಿ. ಗಂಗಾಧರ್, ಎಚ್.ಎ. ಗುರುರಾಜ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.


## ಕುಂಬಳೂರು : ಇಂದು ಪ್ರತಿಭಾ ಪುರಸ್ಕಾರ

ಮಲೇಬೆನ್ನೂರು ಸಮೀಪದ ಕುಂಬಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 50ನೇ ವರ್ಷದ ಸವಿನೆನಪಿಗಾಗಿ ಮತ್ತು ಕೆ.ಕಾಮರಾಜ್ ಇವರ 60ನೇ ವರ್ಷದ ಜನ್ಮದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪಠ್ಯಪುಸ್ತಕ ವಿತರಣೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಅಧ್ಯಕ್ಷತೆ : ಕೆ.ಹೆಚ್.ಆನಂದ್, ಮುಖ್ಯ ಅತಿಥಿಗಳು : ಪತ್ರಕರ್ತರಾದ ಎಂ.ನಟರಾಜನ್, ಜಿಗಳಿ ಪ್ರಕಾಶ್, ಹೆಚ್.ಎಂ.ಸದಾನಂದ್, ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಲೀಲಾವತಿ.









## ರಾಜಭವನಕ್ಕೆ ನುಗ್ಗಿದ ಮಳೆ ನೀರು

ಇಂಫಾಲ್, ಮೇ 31 – ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಮಣಿಪುರದ ರಾಜಭವನದಲ್ಲಿ ನೀರು ನುಗ್ಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಧಾರಾಕಾರ ಮಳೆಯಿಂದಾಗಿ ಇಂಫಾಲ್ ನದಿಯ ನೀರು ಹಲವೆಡೆ ದಂಡೆ ಮೀರಿ ಹರಿಯುತ್ತಿದೆ. ಈ ನೀರು ರಾಜಭವನಕ್ಕೆ ನುಗ್ಗಿದೆ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಕಳೆದ ಎರಡು ದಿನಗಳಲ್ಲಿ ಪರಿಸ್ಥಿತಿ ಸುಧಾರಿಸಿದೆ. ರಾಜಭವನದಲ್ಲಿ ನುಗ್ಗಿದ್ದ ನೀರು ಹಿಂದೆ ಸರಿದಿದೆ ಎಂದವರು ತಿಳಿಸಿದ್ದಾರೆ.


**ಕಮರ್ಷಿಯಲ್ ಬಿಲ್ಡಿಂಗ್ ಬಾಡಿಗೆಗಿದೆ**

**COMMERCIAL BUILDING FOR RENT**

ಮಂಡಿಪೇಟೆ ಮೇನ್ ರೋಡ್, ದಾವಣಗೆರೆ.

20x100 ಅಳತೆಯ ಗ್ರೌಂಡ್ ಫ್ಲೋರ್ 2000 ಅಡಿ ಸೆಲ್ಲರ್ ಬಾಡಿಗೆಗೆ ಇದೆ.

ಆಸಕ್ತರು ಸಂಪರ್ಕಿಸಿ :

98444 06161, 98443 06262


### ಎರಡನೇ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಸುಶೀಲ ಅಶೋಕ ತಳವಾರ್**

ನಿಧನ : 01.06.2022

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷಗಳಾದರೂ, ನಿಮ್ಮ ತತ್ವಾದರ್ಶ, ಕರುಣೆ ಮತ್ತು ಮಾರ್ಗದರ್ಶನ ನಮ್ಮ ಹೃದಯಗಳಲ್ಲಿ ಹಚ್ಚಹಸಿರಾಗಿ ಉಳಿದಿವೆ... ಪ್ರತಿ ದಿನವು ಪ್ರತಿಕ್ಷಣವು ನಿಮ್ಮ ಸ್ಮರಣೆಯೇ ನಮಗೆ ದಿವ್ಯ ಚೇತನ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವೆವು. ನಾವಿಂದು...ಎಂದೆಂದೂ...

ನಿಮ್ಮನ್ನು ಸದಾ ಸ್ಮರಿಸುವ...

ಪತಿ : ಅಶೋಕ ತಳವಾರ್, ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ತಳವಾರ್ ಕುಟುಂಬದವರು ಹಾಗೂ ಬಂಧು-ಮಿತ್ರರು

### ಜನ್ಮದಿನದ ಶುಭಾಶಯಗಳು




**ಶ್ರೀಯುತ ಶಿವಪ್ಪ ಕುರಿ**

(ನಿವೃತ್ತ ಅಧಿಕಾರಿ) ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ

ನಮ್ಮ ಮಾರ್ಗದರ್ಶಕರು, ಸರಳ ಸಜ್ಜನಿಕೆಯ ಸಾಕಾರ ಮೂರ್ತಿಯಾಗಿರುವ ಇವರು ತಮ್ಮ 67ನೇ ವರ್ಷದ ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ಇವರಿಗೆ ಜನ್ಮದಿನದ ಶುಭಾಶಯಗಳು. ಭಗವಂತನು ಇವರಿಗೆ ಆಯುಷ್ಯ, ಆರೋಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಪತ್ನಿ, ಮಕ್ಕಳು, ಸೊಸೆಯಂದಿರು ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas